ಸೃಜನಿ

SRUJANI: Indian Journal of Innovative Research and Development (SIJIRD)
Volume-1 Issue 4, September-October 2022, Pp. 119-134
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಅಂಜನಾದ್ರಿ ಜಾನಪದ

**ಡಾ. ಚಲುವರಾಜು***

*ಪ್ರಾಧ್ಯಾಪಕರು, ಬುಡಕಟ್ಟು ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

***Abstract:***

*ಜಾಗತಿಕ ಇತಿಹಾಸ ಪರಂಪರೆಯಲ್ಲಿ ಹಂಪಿ ತನ್ನದೆ ಆದ ಮಹತ್ವದ ಸ್ಥಾನ ಹೊಂದಿದೆ. ಹಂಪಿ ಒಂದು ಪುಣ್ಯಕ್ಷೇತ್ರ ಈ ಪುಣ್ಯ ಕ್ಷೇತ್ರದ ಪೂರ್ವಕ್ಕೆ ಕಿನ್ನರೇಶ್ವರ, (ರಾಮಸಾಗರ ಸಮೀಪ) ಪಶ್ಚಿಮಕ್ಕೆ ಸೋಮನಾಥ (ಈಗೀನ ಕೊಪ್ಪಳ ಜಿಲ್ಲೆಯ ಶಿವಪುರದ ಸಮೀಪ), ದಕ್ಷಿಣಕ್ಕೆ ಜಂಬುನಾಥ (ಹೊಸಪೇಟೆಯ ಸಮೀಪ) ಹಾಗೂ ಉತ್ತರಕ್ಕೆ ವಾಣಿಭದ್ರೇಶ್ವರ (ಗಂಗಾವತಿಯ ಸಮೀಪಗಳು) ಗುಡಿಗಳಂತಿದ್ದು ಕೇಂದ್ರದಲ್ಲಿ ವಿರೂಪಾಕ್ಷನಿದ್ದಾನೆ. ಈ ಪ್ರದೇಶಗಳನ್ನು ಪಂಪಾಕ್ಷೇತ್ರದ ಪಾರಂಪರಿಕ ಗಡಿಗಳೆಂದು ಗುರುತಿಸಲಾಗುತ್ತದೆ. ಹಂಪೆ ಕರ್ನಾಟಕದ ನಾಗರಿಕತೆಯ ತೊಟ್ಟಿಲಾಗಿ ರೂಪ ಪಡೆದಿದೆ. ಆದಿಮ ಸಂಸ್ಕೃತಿಯಿಂದ ಆಧುನಿಕ ಸಂಸ್ಕೃತಿಯವರೆಗೆ ಜಗತ್ತಿನ ವಿದ್ವಾಂಸರ ಗಮನವನ್ನು ಸೆಳೆದು, ವಿಶ್ವದ ಐತಿಹಾಸಿಕ ಪರಂಪರೆಯಲ್ಲಿ ಮಹೋನ್ನತ ಸ್ಥಾನ ಪಡೆದಿರುವ ಸಾಂಸ್ಕೃತಿಕ ಸಾಮ್ರಾಜ್ಯ ಹಂಪಿಗೆ ಪ್ರತಿದಿನ ಪ್ರವಾಸಿಗರ, ವಿದ್ವಾಂಸರ, ಸಂಶೋಧಕರ ಮಹಾಪೂರವೇ ಹರಿದುಬರುತ್ತದೆ.*

***Keywords:*** *ಅಂಜನಾದ್ರಿ, ಹಂಪಿ, ಐತಿಹಾಸಿಕ ಸ್ಥಳ, ಜಾನಪದ.*

**ಪೀಠಿಕೆ**

ಬೀದರ ಜಿಲ್ಲೆಯು ಭಾರತದ 22ನೇ ಸ್ವಚ್ಚನಗರ ಮತ್ತು ಕರ್ನಾಟಕ ರಾಜ್ಯದ 5ನೇ ಸ್ವಚ್ಚ ನಗರವೆಂಬ ಸ್ಥಾನ ಪಡೆದುಕೊಂಡು ಹೆಗ್ಗಳಿಕೆಗೆ ಪಾತ್ರವಾಗಿದೆ. ಬೀದರ ತನ್ನ ಭೌಗೋಳಿಕ ಗಡಿಯನ್ನು ತೆಲಂಗಾಣ ಮತ್ತು ಕರ್ನಾಟಕ ರಾಜ್ಯದ ಉತ್ತರ ತುದಿಯಲ್ಲಿರುವ ಜಿಲ್ಲೆ ಭಾಲ್ಕಿ, ಹುಮನಾಬಾದ, ಬೀದರ, ಬಸವಕಲ್ಯಾಣ ಮತ್ತು

ಸಾಂಸ್ಕೃತಿಕ ಮಹತ್ವದ ಹಂಪಿಯಲ್ಲಿ ಈಗ ಉಳಿದಿರುವುದು ರಾಜಮಹಾರಾಜರು ಹಾಗೂ ಜನಸಾಮಾನ್ಯರು ಬಿಟ್ಟುಹೋದ ಸ್ಮಾರಕಗಳು. ಈ ಪ್ರದೇಶದಲ್ಲಿ ಇಂದಿಗೂ ಬದುಕಿ ಬಾಳುತ್ತಿರುವ ಜನರು ಹಾಗೂ ಈಗಲೂ ಕೂಡ ಈ ಪ್ರದೇಶಕ್ಕೆ ಬಂದು ಹೋಗುವ ಭಕ್ತರು, ಇತಿಹಾಸಕಾರರು, ಸಂಶೋಧಕರು, ಪ್ರವಾಸಿಗರು ಇವುಗಳನ್ನು ತಮ್ಮವೇ ಭಾಷೆಗಳಲ್ಲಿ ಮಾತನ್ನಾಡಿಸುತ್ತಾರೆ. ಇವುಗಳಿಗೆ ಮಾತಿನ ಜೀವತುಂಬಿದ ಜನಪದರು ಇಂದಿಗೂ ಅವುಗಳೊಡನೆ ಅನ್ಯೋನ್ಯ ಸಂಬಂಧವಿರಿಸಿಕೊಂಡಿದ್ದಾರೆ. ಹಂಪಿಯ ಪರಿಸರದ ಹೆಬ್ಬಂಡೆಗಳಲ್ಲಿ ಒಂದಾದ ಅಕ್ಕಂತಗಿಯರ ಗುಂಡುಗಳು, ಕಲ್ಲಿನ ಮೂಲಕ ಮಾನವೀಯ ಸಂಬಂಧಗಳನ್ನು ಬೆಸೆಯುವ ಭಾರತೀಯ ಸಂಸ್ಕೃತಿಯ ಮಹತ್ವವನ್ನು ಸಾರುವ ಪ್ರತೀಕಗಳಾಗಿ ಕಂಡುಬರುತ್ತವೆ. ಹೀಗಾಗಿ ಹಂಪಿ ಅಧ್ಯಯನಕಾರರ ಅಕ್ಷಯ ಪಾತ್ರೆಯಾಗಿದೆ.

ಇಲ್ಲಿನ ಚರಿತ್ರೆ ಇಲ್ಲಿನ ಜನರ ನಾಲಿಗೆಗಳಲ್ಲಿ ದಾಖಲಾಗಿರುತ್ತದೆ. ಅಂಥ ಮೌಖಿಕ ದಾಖಲೆಗಳು ಲಿಖಿತ ದಾಖಲೆಗಳಷ್ಟೇ ಮಹತ್ವದ್ದಾಗಿವೆ. ಮಾತ್ರವಲ್ಲ ಸಂಸ್ಕೃತಿಯ ಅಧ್ಯಯನದ ದೃಷ್ಟಿಯಿಂದ

***Please cite this article as:*** ಚಲುವರಾಜು. (2022). ಅಂಜನಾದ್ರಿ ಜಾನಪದ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರಿಸರ್ಚ್ ಅಂಡ್ ಡೆವೆಲಪ್‌ಮೆಂಟ್*, 1(4), 119–134.

ಪ್ರಮುಖ ಆಕರಗಳೂ ಆಗಿವೆ. ಹೀಗಿದ್ದರೂ ವಸಾಹತೀಕರಣಕ್ಕೊಳಪಟ್ಟ ವಿದ್ವಾಂಸರು ಜನರ ನಡುವೆ ಇರುವ ಮೌಖಿಕ ರೂಪದ ದಾಖಲೆಗಳನ್ನು ನಿರ್ಲಕ್ಷಿಸಿಕೊಂಡೇ ಬಂದಿದ್ದಾರೆ. ಜನರು ಏನನ್ನು ನಂಬಿದ್ದಾರೋ ಅದನ್ನು ವಿದ್ವಾಂಸರು ನಂಬುತ್ತಿಲ್ಲ ಮತ್ತು ವಿದ್ವಾಂಸರು ಏನನ್ನು ಹೇಳುತ್ತಿದ್ದಾರೋ ಅದನ್ನು ಜನರು ನಂಬುತ್ತಿಲ್ಲ. ಈ ಬಗೆಯ ಬಿಕ್ಕಟ್ಟುಗಳಿಂದ ನಮಗೆ ಬಿಡುಗಡೆ ಇರುವಂತೆ ತೋರುವುದಿಲ್ಲ. ನಮ್ಮ ವಿದ್ಯಾಭ್ಯಾಸ ಪದ್ಧತಿಯ ತರ್ಕಬದ್ಧ ಅಂತ್ಯವಿದು.

ಅದೇನಿದ್ದರೂ ಭಾರತದಂಥ ದೇಶದಲ್ಲಿ ಮೌಖಿಕ ಪರಂಪರೆಯ ಸಾಮಗ್ರಿಗಳನ್ನು ನಿರ್ಲಕ್ಷಿಸಿಕೊಂಡು ಬಂದರೆ ಅನೇಕ ಬಗೆಯ ತೊಂದರೆಗಳನ್ನು ನಷ್ಟಗಳನ್ನು ಎದುರಿಸಬೇಕಾಗುತ್ತದೆ. ಅಕ್ಷರ ಜ್ಞಾನ ಬಹಳ ಕಡಿಮೆ ಇರುವ ನಾಡಿನಲ್ಲಿ ಸಾಂಸ್ಕೃತಿಕ ಇತಿಹಾಸ ಬರೆಯುವವರು ಅಕ್ಷರವನ್ನೇ ಆಧರಿಸಿಕೊಂಡರೆ ಅಂತಹ ಇತಿಹಾಸ ಪಾರ್ಶ್ವಿಕವಾಗುತ್ತದೆ. ಏಕೆಂದರೆ ಅಕ್ಷರ ಬಲ್ಲವರು ಬರೆಯುವ ವೃತ್ತಾಂತಗಳಲ್ಲಿ ಅನಕ್ಷರಸ್ಥರ ವಿವರಣೆಗಳಿರುವ ಸಾಧ್ಯತೆಗಳು ತೀರ ಕಡಿಮೆ. ಭಾರತದಲ್ಲಂತೂ ಅಕ್ಷರ ಬಲ್ಲವರು ಆಳುವ ವರ್ಗದವರೊಂದಿಗೆ ತಮ್ಮನ್ನು ಗುರುತಿಸಿಕೊಂಡದ್ದರಿಂದ ಬಹುಸಂಖ್ಯಾತರು ದೂರವೇ ಉಳಿಯುವಂತಾಯಿತು. ಮೇಲಾಗಿ ಈ ನಾಡು ಜಾತಿ–ಜಾತಿಗಳ ಮಧ್ಯೆ ಒಡೆದು ಚೂರು ಚೂರಾಗಿದೆ. ನಮಗೆಲ್ಲ ತಿಳಿದಿರುವಂತೆ ಇಲ್ಲಿ ಅಕ್ಷರವು ಒಂದು ವರ್ಗದ ಸೊತ್ತಾಗಿತ್ತು. ಕ್ವಚಿತ್ತಾಗಿ ಕ್ಷತ್ರಿಯರು ಮತ್ತು ಇತರರು ಅಕ್ಷರ ಕಲಿತಿದ್ದರೂ ಅವರೆಲ್ಲರೂ ಹೆಚ್ಚು ಕಲಿತ ವರ್ಗಕ್ಕೆ ತಲೆಬಾಗುತ್ತಲೇ ಇದ್ದರು. ಭಾರತೀಯ ಪುರಾತನ ವಿದ್ಯಾಭ್ಯಾಸ ಪದ್ಧತಿಯ ಪರಿಭಾಷಿಕ ಪದಗಳೆಲ್ಲವೂ ಅಕ್ಷರ ಬಲ್ಲವರ ಕೇಂದ್ರಿತವಾಗಿರುವುದು ಸ್ಪಷ್ಟವೇ ಇದೆ. ಈ ಪರಿಭಾಷೆಗಳುರಿತರೆ ವರ್ಗಗಳ ಬಗೆಗೆ ವಿವರವನ್ನು ನೀಡಲಾಗದ ಪರಿಮಿತಿಗೆ ತಾವೇ ಒಳಗಾಗಿವೆ. ಇತಿಹಾಸ ಪ್ರಸಿದ್ಧವಾದ ಹಂಪಿಯಂತಹ ಸ್ಥಳಗಳಲ್ಲಿ ದೊರೆಯುವ ಲಿಖಿತ ಆಕರಗಳು ಸಾಮಾನ್ಯವಾಗಿ ರಾಜರುಗಳ ವೈಭವ, ಅವರು ನಡೆಸಿದ ಯುದ್ಧಗಳು, ಅವರ ನಡುವಿನ ಒಪ್ಪಂದಗಳು, ಅವರು ಕೊಟ್ಟ ದಾನಗಳ ಪ್ರಶಂಸೆ, ಅವರಿಗಾಗಿ ಹೋರಾಡಿ ಮಡಿದ ವೀರಯೋಧರ ಉಲ್ಲೇಖ, ಇಂಥ ವಿವರಗಳಿಗೆ ಮಾತ್ರ ಸೀಮಿತವಾಗಿರುತ್ತವೆ. ಈ ರಾಜರುಗಳ ವೈಭವದ ಪ್ರತೀಕಗಳಾದ ದೇವಾಲಯಗಳು ಮತ್ತು ಮಠಗಳ ವರ್ಣನೆಗೆ ಅಕ್ಷರಮಾಧ್ಯಮ ಬದ್ಧವಾಗಿರುತ್ತದೆ. ಇಂಥಲ್ಲಿ ಬಹುಸಖ್ಯಾತ ಪ್ರಜೆಗಳು ಅಥವಾ ಜನಸಾಮಾನ್ಯರು ಮತ್ತು ಅವರ ಪ್ರತಿಕ್ರಿಯೆಗಳು ಪೂರ್ಣವಾಗಿ ನಿರಾಕರಣೆಗೆ ಒಳಪಟ್ಟಿರುತ್ತವೆ. ಇದರ ಅರ್ಥ ಅನಕ್ಷರಸ್ಥರಿಗೆ ಚರಿತ್ರೆಯೇ ಇರಲಿಲ್ಲವೆಂದಲ್ಲ. ಅವರ ಚರಿತ್ರೆ ಲಿಖಿತ ರೂಪದಲ್ಲಿ ದಾಖಲಾಗಿಲ್ಲವೆಂದಷ್ಟೇ ಅರ್ಥ.

ಸಾಮಾನ್ಯವಾಗಿ ಜನರು ತಮ್ಮ ಪರಂಪರೆಯ ನೆನಪುಗಳನ್ನು ಮೌಖಿಕ ರೂಪದಲ್ಲಿ ಉಳಿಸಿಕೊಂಡು ಬಂದಿರುತ್ತಾರೆ. ಈ ನಾಡಿನಲ್ಲಿ ಜನರು ಮಾತಿಗೆ ಅಕ್ಷರದಷ್ಟೇ ಮಹತ್ವವನ್ನು ನೀಡಿಕೊಂಡು ಬಂದಿದ್ದಾರೆ. ಈಚಿನ ದಿನಗಳಲ್ಲಿ ಅಕ್ಷರಗಳು ಯಾವುದನ್ನು ಕರಾರುವಕ್ಕಾಗಿ ನಿರ್ವಚಿಸುತ್ತವೆಯೋ ಅದನ್ನೆ ಅನಕ್ಷರಸ್ಥರೂ ಮಾತಿನಲ್ಲಿ ಅಷ್ಟೇ ಕರಾರುವಕ್ಕಾಗಿ ನಿರ್ವಚಿಸಿಕೊಂಡು ಬಂದಿದ್ದಾರೆ. 'ಮಾತಿಗೆ ಮಾಟದ ಶಕ್ತಿ ಇದೆ' ಎಂದು ಜನಪದರು ಭಾವಿಸಿರುವುದರಿಂದ ಅವರು ಮಾತನ್ನು ಮೀರುವ ಸಾಹಸಕ್ಕೆ ಇಳಿಯುವುದಿಲ್ಲ. ಈ ರೀತಿ ಜನರು ಮಾತಿಗೆ ತಮ್ಮ ಬದ್ಧತೆಯನ್ನು ತೋರ್ಪಡಿಸಿಕೊಂಡು ಬಂದಿರುವುದರಿಂದ, ಮಾತಿನ ಮೂಲಕ ತಮ್ಮ ಇತಿಹಾಸದ ಕೆಲವು ನೆನಪುಗಳನ್ನು ಸುರಕ್ಷಿತವಾಗಿ ರಕ್ಷಿಸಿಕೊಂಡು ಬಂದಿದ್ದಾರೆ.

ಬಹಳ ಕುತೂಹಲದ ಅಂಶವೆಂದರೆ ಲಿಖಿತ ಇತಿಹಾಸಕ್ಕಿಂತ ಭಿನ್ನವಾದ ವಿವರಗಳನ್ನು ಮೌಖಿಕ ಸಾಮಗ್ರಿಗಳು ನೀಡುವುದು. ಆಳುವವರನ್ನು ಕುರಿತು ಶಾಸನಗಳು ಹೇಳುವ ಇತಿಹಾಸ ಮತ್ತು ಅವರನ್ನು

ಕುರಿತು ಕಂಠಸ್ಥ ಪರಂಪರೆಯಲ್ಲಿರುವ ಐತಿಹ್ಯಕ್ಕೂ ಮಧ್ಯೆ ತುಂಬ ಅಂತರವಿರುತ್ತದೆ. ಜೀವ ಸಂಬಂಧಿ ಮೌಲ್ಯಗಳು ಜನಪದರಲ್ಲಿ ಯತೇಚ್ಚವಾಗಿ ಕಂಡುಬರುತ್ತವೆ

**ಜನಪದ ಕಾವ್ಯಗಳು**

ಹಂಪಿಯ ಬಗೆಗೆ ಲಭ್ಯವಿರುವ ಕಾವ್ಯಗಳೆಲ್ಲ ಪುರಾಣ ಸ್ವರೂಪದಲ್ಲಿವೆ. ಅಂದರೆ ಐತಿಹಾಸಿಕ ಹಂಪಿಗೆ ಜನಪದ ಕಾವ್ಯಗಳಲ್ಲಿ ಪೌರಾಣಿಕ ಆಯಾಮಗಳನ್ನು ನೀಡಲಾಗಿದೆ. ಇದಕ್ಕೆ ಕಾರಣ ಬಹಳ ಸ್ಪಷ್ಟವೇ ಇದೆ. ಹಂಪಿಯು ರಾಮಾಯಣದಲ್ಲಿ ಉಲ್ಲೇಖಿತವಾಗಿದ್ದು ರಾಮಲಕ್ಷ್ಮಣರು ಈ ಪ್ರದೇಶಕ್ಕೆ ಬಂದಿದ್ದರು ಹನುಮಂತ ಹಾಗು ವಾಲಿ ಸುಗ್ರೀವರ ಸಂಪರ್ಕಸಾಧಿಸಿದ್ದ ಬಗೆಗೆ ವಾಲ್ಮೀಕಿ ರಾಮಾಯಣದ ಕೆಲವು ಭಾಗಗಳಲ್ಲಿ ಉಲ್ಲೇಖಗಳು ದೊರಕುತ್ತವೆ. ಅಂಜನಾದೇವಿ, ಹನುಮಂತ, ವಾಲಿ, ಸುಗ್ರೀವ, ಜಾಂಬುವಂತ, ಇತ್ಯಾದಿ ಪ್ರಮುಖ ವ್ಯಕ್ತಿಗಳ ಬಗೆಗೆ ಸಾಕಷ್ಟು ಮೌಖಿಕ ಆಕರಗಳು ಈ ಪ್ರದೇಶದಲ್ಲಿ ಹೆಚ್ಚಾಗಿ ದೊರಕುತ್ತವೆ. ಹನುಮಂತನ ಬಗೆಗಿನ ಅಪಾರವಾದ ಜನಪದ ನಂಬಿಕೆ, ಆಚರಣೆ ಹಾಗೂ ಸಂಪ್ರದಾಯಗಳು ಇಂದಿಗೂ ರೂಢಿಯಲ್ಲಿರುವುದು ಕಂಡುಬರುತ್ತದೆ. ಹಾಗೆಯೇ ಹಂಪಿಯು 'ಪುರಾತನ ಕಿಷ್ಕಿಂಧೆ'ಯಾಗಿತ್ತು ಎಂಬ ಅಂಶವನ್ನು ಸಾರ್ವತ್ರಿಕವಾಗಿ ಒಪ್ಪಿಕೊಳ್ಳಲಾಗಿದೆ. ಹಂಪಿಯು ಜನಪದರಿಗೆ ವಿಜಯನಗರದ ಇತಿಹಾಸಕ್ಕಿಂತ ರಾಮಾಯಣದ ಕಥಾನಕವೇ ಹೆಚ್ಚು ಪ್ರಿಯವಾಗಿದೆ. ಹಂಪಿಯಾದ್ಯಂತ ಓಡಾಡುವ ಮಂಗಗಳನ್ನು ರಾಮಾಯಣ ಕಾಲದ ರಾಮನ ಕಪಿ ಸೇನೆಯಾಗಿ ಗುರುತಿಸುವ ಪ್ರವೃತ್ತಿ ಇದೆ. ಇಂತಹ ಕೆಲವು ಹಾಡುಗಳನ್ನು ಗಮನಿಸಬಹುದು.

**ಹನುಮ ಹಂಪಿಯ ಅಂಜನಾದ್ರಿಯಲ್ಲಿ ಹುಟ್ಟಿನ ಬಗೆಗಿನ ತ್ರಿಪದಿ ಹಾಡುಗಳು**

*ತಾನಾನೋ ತಂದು ನಾನಾನೋ ಸೈ*
*ತಾನಾನೀ ತಂದು ನಾನಾನೋ ॥*
*(ಹಂಪಿಯ ಹನುಮನ ಸೆಳವು)*
*ಅಡವಿಯಾ ಗಂಜನದೇವಿ ಗಿಡಿಗಾನ ಹಡೆದಾಳು*
*ತೊಡೆಯ ತೊಳೆಯೋಕೆ ನೀರಿಲ್ಲ ಹನುಮಣ್ಣ ।*
*ತಿರುವ್ಯಾನೋ ಹಂಪಿ ಹೊಳೆಯನ್ನ ॥*

*ಕಟ್ಯಾಂಗಜನದೇವಿ ಪುತ್ರನ ಹಡೆದಾಳು*
*ಹೊಟ್ಟೆ ತೊಳೆಯೋಕೆ ನೀರಿಲ್ಲ ಹನುಮಂತ ।*
*ಸುತ್ತೇಳು ಸಮುದ್ರ ತಿರುವ್ಯಾನು ॥*
*ಹುಟ್ಟುಗಲ್ಲಿನ ಮ್ಯಾಲೆ ಹುಟ್ಟಿದಂಗೈದಾನೆ*
*ದಿಟ್ಟನಾಮದ ಹನುಮಣ್ಣ ಲಂಕೆಯ ।*
*ಸುಟ್ಟು ಬಂದೂರ ಒರಗ್ಯಾನೋ ॥*
*ಕರಿಯ ಬಂಡೆಯ ಮ್ಯಾಲೆ ಮದರಂಗ ಹೊಯ್ದಾನೆ*
*ಹರಿಯ ನಾಮದ ಹನುಮಣ್ಣ ಲಂಕೆಯ ।*
*ಉರಿಸಿ ಬಂದೂರ ಒರಗ್ಯಾನೋ ॥*

*ಕ್ವಾಡಂಗ ನಿವನೆಂದು ಕೇಡು ನುಡಿಯಲೀ ಬೇಡಿ*
*ನೋಡಿರೆನವ್ವ ಅವನ ಸಾಹಸ ಹಂಪಿಯ ।*
*ಕ್ವಾಟೀಯ ಕಿತ್ತು ಉರಿದಾನೋ ॥*

*ಇದು ಮಂಗನೆಂದು ಕುಂದು ನುಡಿಯಲೀ ಬೇಡಿ*
*ನೋಡಿರೆನವ್ವ ಅವನ ಸಾಹಸ ।*
*ಹಂಪಿಯ ಗುಡಿಯನ್ನೇ ಕಿತ್ತು ವೊಗದಾನು ॥*

**ಐತಿಹ್ಯಗಳು**

'ಚರಿತ್ರೆ' ಎಂಬ ಹೆಸರಿನಲ್ಲಿ ಏನನ್ನು ಬರೆದಿಡಲಾಗುತ್ತಿದೆಯೋ ಅದನ್ನು ನಿಜವೆಂದೂ, ಕಟ್ಟುಕತೆಗಳಲ್ಲವೆಂದೂ ಹೇಳಲಾಗುತ್ತಿದೆ. 'ಇತಿಹಾಸ' ಎಂಬ ಪದದ ಅರ್ಥವೂ ಅದನ್ನೇ ಪ್ರಕಟಿಸುತ್ತದೆ. ಈ ಹಿನ್ನೆಲೆಯಲ್ಲಿ ಐತಿಹ್ಯಗಳನ್ನು ಕಟ್ಟುಕಥೆಗಳೆಂದೂ ಅವು ನಿಜವಾಗಿ ನಡೆದಿರುವ ಸಾಧ್ಯತೆ ಕಡಿಮೆಯೆಂದೂ ಭಾವಿಸಲಾಗುತ್ತದೆ. ಆದರೆ ಯಾರು ಐತಿಹ್ಯವನ್ನು ನಿರೂಪಿಸುತ್ತಿರುತ್ತಾರೋ ಅವರ ದೃಷ್ಟಿಯಿಂದ ಅದು ನಿಜವೇ ಆಗಿರುತ್ತದೆ. ಆ ನಿರೂಪಕನ ತಿಳುವಳಿಕೆಯ ಪರಿಧಿಯೊಳಗಡೆ ಅದು 'ನಿಜವಾಗಲೂ ಹಿಂದೆ ನಡೆದ ಘಟನೆ'ಯೆ ಆಗಿರುತ್ತದೆ ಇತಿಹಾಸದ ಬರಹಾಗರರು ತಮ್ಮ ಬರಹಕ್ಕೆ ಅಗತ್ಯವಾದ ಆಧಾರಗಳನ್ನು ನೀಡುವ ಹಾಗೆ ಐತಿಹ್ಯಹ ನಿರೂಪಕರೂ ತಮ್ಮ ನಿರೂಪಣೆಗೆ ಅಗತ್ಯವಾದ ಆಧಾರಗಳನ್ನು ನೀಡುತ್ತಾರೆ. ಈ ಆಧಾರಗಳು ಯಾವುದೂ ಆಗಬಹುದು. ಅವಶೇಷ, ಪಳಿಯುಳಿಕೆ, ವಸ್ತು, ಸ್ಥಳ, ಕೆರೆ, ಕಟ್ಟೆ, ಗುಡ್ಡ, ಬೆಟ್ಟ, ಬಂಡೆ, ದಿನ್ನೆ, ಉಡುಗೆ, ತೊಡುಗೆ, ಆಯುಧ, ಪ್ರಾಣಿ, ಸಸ್ಯ, ಮನುಷ್ಯ ಹೀಗೆ ಯಾವುದು ಬೇಕಾದರೂ ಐತಿಹ್ಯಕ್ಕೆ ಆಧಾರವಾಗಬಹುದು. ಯಾವುದು ಐತಿಹ್ಯಕ್ಕೆ ಆಧಾರವಾಗುತ್ತದೋ ಅದರ ಮುಖ್ಯ ಗುಣವೊಂದು ಐತಿಹ್ಯದ ನಿರೂಪಣೆಯಲ್ಲಿ ಪ್ರಧಾನ ಪಾತ್ರ ನಿರ್ವಹಿಸುತ್ತದೆ. ಆಧಾರವಿಲ್ಲದೆ ಐತಿಹ್ಯ ಹುಟ್ಟುವುದಿಲ್ಲ. ನಿರೂಪಕನ ಪೀಠಿಕಾ ರೂಪದ ಮಾತಿನಲ್ಲಿಯೇ ಈ ಆಧಾರಗಳು ಸ್ಪಷ್ಟವಾಗುತ್ತದೆ. ಸರಿಯಾದ ಸ್ಥಳ, ನಿರ್ದಿಷ್ಟ ಸಮಯ, ಮತ್ತು ವ್ಯಕ್ತಿಯ ಬಗ್ಗೆ ಯಾವ ಆತಂಕ ತಡವರಿಕೆ ಇಲ್ಲದೆ ವಿಷಯ ಮಂಡನೆ ಮಾಡುವ ಆತ ಕಣ್ಣೆದುರಿಗೇ ಇರುವ ಭೌತಿಕ ಆಧಾರಗಳಿಂದಲೇ ಅದನ್ನು ಇನ್ನಷ್ಟು ಗಟ್ಟಿಗೊಳಿಸುತ್ತಾನೆ. ಇವೆಲ್ಲ ಸಾಮಾನ್ಯ ಜನರಿಗೂ ತಿಳಿದಿರುತ್ತದೆ, ಕಣ್ಣಿದ್ದವರಿಗೆ ಕಾಣುತ್ತದೆ, ಕಿವಿಯಿದ್ದವರಿಗೆ ಕೇಳಿಸುತ್ತದೆ, ನಿಮಗಿನ್ನೂ ತಿಳಿದಿಲ್ಲವೆ? ಎಂಬ ಧಾಟಿಯಲ್ಲಿ ಆತನ ನಿರೂಪಣೆ ಇರುತ್ತದೆ. ಜೊತೆಗೆ ತನ್ನಲ್ಲಿರುವ ಆಧಾರ ಸಾಮಗ್ರಿಗಳನ್ನು ನಿರೂಪಣೆಯಲ್ಲಿ ಮತ್ತೆ ಮತ್ತೆ ಬಳಸಿಕೊಳ್ಳುತ್ತಾನೆ. ಹೀಗೆ ಮಾಡುವಾಗ ನಿರೂಪಣೆಯಲ್ಲಿರುವ ಅಮೂರ್ತಾಂಶಗಳೆಲ್ಲ ಗೌಣವಾಗುತ್ತದೆ. ಅದು ಅಲ್ಲಿರುವುದರಿಂದಲೇ ನಾನು ಅದನ್ನು ನಂಬಿದೆ, ಇಲ್ಲದಿದ್ದರೆ ನಾನೆಲ್ಲಿ ನಂಬುತ್ತಿದ್ದೆ? ನನಗೂ ನಿಮ್ಮ ಹಾಗೆ ಆಧಾರವಿಲ್ಲದೆ ನಂಬಲಿಕ್ಕಾಗುವುದಿಲ್ಲ ಎಂದು ಹೇಳುವ ಮೂಲಕ ಆತ ತನ್ನ ನಿರೂಪಣೆಯನ್ನು ನಿಲ್ಲಿಸುತ್ತಾನೆ. ಈ ಬಗೆಯ ಮುಕ್ತಾಯವು ನಿರೂಪಣೆಯ ಸತ್ಯವನ್ನು ಇನ್ನಷ್ಟು ಬಲಪಡಿಸುತ್ತದೆ. ಹೀಗೆ ಐತಿಹ್ಯಗಳು ಜನರ ಇತಿಹಾಸವನ್ನು ತಮ್ಮದೇ ರೀತಿಯಲ್ಲಿ ಪ್ರಕಟಪಡಿಸುತ್ತವೆ.

ಹಂಪಿಯ ರಾಮಾಯಣದ ಬಗೆಗೆ ಸಾಕಷ್ಟು ಸ್ಥಳ ಪುರಾಣ ಹಾಗೂ ಐತಿಹ್ಯಗಳು ಲಭಿಸುತ್ತವೆ. ಇವುಗಳನ್ನು ಮೂರು ರೀತಿಯಿಂದ ವಿಭಜಿಸಿಕೊಂಡು ಅಧ್ಯಯನ ಮಾಡಬಹುದು. ಅವುಗಳೆಂದರೆ ವ್ಯಕ್ತಿ ಪ್ರಧಾನ ಐತಿಹ್ಯಗಳು, ಸ್ಥಳ ಪ್ರಧಾನ ಐತಿಹ್ಯಗಳು ಮತ್ತು ಘಟನಾ ಪ್ರಧಾನ ಐತಿಹ್ಯಗಳು

**ವ್ಯಕ್ತಿ ಪ್ರಧಾನ ಐತಿಹ್ಯಗಳು**

ಹನುಮನ ಸೆಳೆವು (ಹನುಮನಹಳ್ಳಿ), ಅಗಸ್ಥ್ಯತೀರ್ಥ (ಸೋಮನಾಥ ಬೆಟ್ಟ), ಗೌತಮಋಷಿ ಆಶ್ರಮ (ಶಿವಪುರದ ಸಮೀಪ), ಸೋಮನಾಥ (ಶಿವಪುರದ ಸಮೀಪ), ಅಂಜನಾದ್ರಿ ( ಪಂಪಾಸರೋವರ ಸಮೀಪ), ಸುಗ್ರೀವನ ಗುಹೆ (ಚಕ್ರತೀರ್ಥದ ಸಮೀಪ), ವಾಲಿ ಭಂಡಾರ (ಆನೆಗುಂದಿ), ವಾಲಿ ಕೋಟೆ (ಋಷ್ಯಮುಖ ಪರ್ವತ), ತಾರ ಬೆಟ್ಟ (ಆನೆಗೊಂದಿ), ವಾಲಿಕಾಷ್ಟ (ವೆಂಕಟಾಪುರ ನದಿತೀರ), ದುಂದುಬಿ ಗುಹೆ (ಚಕ್ರತೀರ್ಥದ ಸಮೀಪ), ರಾಮ ವಾಲಿಯನ್ನು ಕೊಂದ ಸ್ಥಳ ( ತಾರಬೆಟ್ಟ ಆನೆಗೊಂದಿ), ಸೀತೆ ಸೆರಗು (ಸುಗ್ರೀವ ಗುಹೆ ಸಮೀಪ), ಸೀತೆ ಸರಸ್ಸ್ (ಹೊಂಡ), ರಾಮತೀರ್ಥ (ಮಾಲ್ಯವಂತ ಬೆಟ್ಟ), ಮಾಲ್ಯವಂತ (ಕಮಲಾಪುರ ಸಮೀಪ), ಸೋಮತೀರ್ಥ (ಬುಕ್ಕಸಾಗರ ಸಮೀಪ), ಜಟಿಂಗ ರಾಮೇಶ್ವರ (ನೂಂಕಿಮಲೆ), ಶಬರಿ ಗುಹೆ (ಪಂಪಸರೋವರ), ಚಂಚಲಗುಡ್ಡ (ಆನೆಗೊಂದಿ), ಹೇಮಕೂಟ (ಹಂಪಿ), ಮತ್ತು ಅಂಜನಮ್ಮನ ಗುಹೆ (ಶಿವಪುರದ ಸಮೀಪ)

**ವಾಲಿ ಸುಗ್ರೀವ ಹಾಗೂ ಅಂಜನಾದೇವಿಯರ ಹುಟ್ಟಿನ ಕಥೆ**

ಕಿಷ್ಕಿಂಧಾ ಕ್ಷೇತ್ರದ ಪಶ್ಚಿಮಕ್ಕೆ ಕಂಡುಬರುವ ಪಂಪಾಕ್ಷೇತ್ರದ ಪಶ್ಚಿಮದ ಧಾರ್ಮಿಕ ಗಡಿಯಾಗಿ ಗುರುತಿಸಲ್ಪಡುವ ಪ್ರದೇಶವೆ ಸೋಮನಾಥಬೆಟ್ಟ ಅಥವಾ ಸೋಮಕ್ಷೇತ್ರ. ಅತ್ಯಂತ ಎತ್ತರವಾದ ಏಕಶಿಲಾಬೆಟ್ಟ ಇದಾಗಿದೆ. ಆ ಕಾಲಕ್ಕೆ ತುಂಗಭದ್ರಾನದಿಯ ಈ ಪ್ರದೇಶ ದಟ್ಟಾರಣ್ಯದಿಂದ ಕೂಡಿದ ಋಷಿಮುನಿಗಳ ತಪೋಭೂಮಿಯಾಗಿತ್ತು. ಒಮ್ಮೆ ವೈಶಾಖ ಮಾಸದ ಹುಣ್ಣಿಮೆಯ ದಿನದಂದು ಸೋಮಕುಂಡ ಯಾತ್ರೋತ್ಸವಕ್ಕಾಗಿ ದಿಕ್ಕುದಿಕ್ಕುಗಳಿಂದ ಭಕ್ತರು ಅಲ್ಲಿಗೆ ಬರುತ್ತಿದ್ದರು. ಅಹಲ್ಯೆ ಮತ್ತು ಗೌತಮ ಋಷಿಗಳ ಆಶ್ರಮ ಇದ್ದದ್ದು ತುಂಗಭದ್ರ ನದಿ ತೀರದಲ್ಲಿ. ಪರಮ ಧರ್ಮಜ್ಞನಾದ ಗೌತಮ ಮುನಿಯು ತನ್ನ ಇಬ್ಬರು ಗಂಡುಮಕ್ಕಳನ್ನು ಹೆಗಲಮೇಲೆ ಕೂರಿಸಿಕೊಂಡು ತನ್ನೊಬ್ಬ ಮಗಳನ್ನು ಕೈಹಿಡಿದು ನಡೆಸಿಕೊಂಡು ಬರಿಗಾಲಿನಲ್ಲಿ ಬಹುದೂರದ ದಾರಿಯನ್ನು ಕ್ರಮಿಸಿ ಸೋಮಗಿರಿಯನ್ನು ಸೇರಿದರು. ನೆತ್ತಿಯ ಮೇಲಿನ ಸೂರ್ಯನ ಬಿರುಬೇಸಿಗೆಯ ಕಾಲವದು. ಏಕಶಿಲಾ ಬೆಟ್ಟ ಕಾದ ಕಬ್ಬಿಣದಮೇಲೆ ಕಾಲಿಟ್ಟಂತೆ ಸುಡುವ ಹಂಗಾಲು. ಬರಿಗಾಲಲ್ಲಿ ನಡೆಯುವುದು ಅಷ್ಟು ಸುಲಭದ ಮಾತಲ್ಲ. ಗೌತಮ ಮುನಿಗಳು ತನ್ನ ಹೆಗಲಮೇಲಿನ ಇಬ್ಬರು ಗಂಡುಮಕ್ಕಳನ್ನು ಕೆಳಗಿಳಿಸಲಿಲ್ಲ. ಬರಿಗಾಲಿನಲ್ಲಿ ನಡೆಯುತ್ತಿದ್ದ ಮಗಳನ್ನ ಎತ್ತಿಕೊಳ್ಳಲಿಲ್ಲ. ಕಾದ ಬಂಡೆಯಮೇಲೆ ನಡೆಯಲಾರದೆ ದು:ಖಿಸುತ್ತ ತಂದೆಯ ಮನನೋಯುವಂತೆ ಕಠಿಣವಾದ ಮಾತುಗಳನ್ನಾಡಿದಳು. 'ಏನಪ್ಪ ನೀನು ಅನ್ಯರಿಗೆ ಹುಟ್ಟಿದ ಈ ಇಬ್ಬರು ಗಂಡುಮಕ್ಕಳನ್ನು ನೀನು ಹೆಗಲಮೇಲೆ ಕೂರಿಸಿಕೊಂಡು ಹೋಗುತ್ತಿದ್ದೀಯಾ. ತಂದೆಯಾದ ನಿನಗೆ ಹುಟ್ಟಿದ ಮಗಳಾದ ನನ್ನನ್ನು ಈ ಬಿರುಬಿಸಿಲಿನಲ್ಲಿನಡೆಸಿಕೊಂಡು ಹೋಗುತ್ತಿದ್ದೀಯಾ. ಧರ್ಮಜ್ಞನಾದ ನೀನು ಹೀಗೆ ಮಾಡಬಹುದೆ?

ಮಗಳ ಈ ಮಾತಿನಿಂದ ಗೌತಮ ಮುನಿಗೆ ಮಾತೇಬಾರದಂತಾಗಿ ಮನಸ್ಸಿಗೆ ತುಂಬಾ ನೋವುಂಟಾಯಿತು. ಮುನಿಗಳ ಮನಸ್ಸಿನಲ್ಲಿ ಅನುಮಾನದ ಅಲೆಗಳು ಏಳತೊಡಗಿದವು. 'ಏನಮ್ಮಾ ಮಗಳೆ ನೀನು ಕೋಪದಿಂದ ಹೀಗೆ ಮಾತಾಡ್ತಾ ಇದ್ದೀಯೋ, ಸತ್ಯ ಹೇಳ್ತಿದ್ದೀಯೋ, ನಿನ್ನ ವಯಸ್ಸಿಗೆ ಮೀರಿ ಮಾತಾಡ್ತಿದ್ದೀಯಾ. ನಿನ್ನ ಮಾತು ಸತ್ಯ ಅಂತ ತೋರಿಸ್ತೀಯಾ' ಎಂದು ಮುನಿಗಳು ಕೇಳಿದರು.

ಆ ಪುಟ್ಟ ಹುಡುಗಿ ಧೈರ್ಯದಿಂದ 'ನೋಡಪ್ಪ ಈ ಸೋಮಕುಂಡ ಅತ್ಯಂತ ಪವಿತ್ರವಾದುದು ಇಲ್ಲಿ ಸತ್ಯಾಸತ್ಯಗಳನ್ನು ನಿರ್ಣಯಿಸಬಹುದು. ಪುಣ್ಯಶೀಲಾತ್ಮನು ಈ ತೀರ್ಥದಲ್ಲಿ ಒಮ್ಮ ಮುಳುಗಿಎದ್ದರೆ ಮೊದಲ ರೂಪದಲ್ಲೇ ಇರುತ್ತಾರೆ. ಒಂದುವೇಳೆ ಅಸತ್ಯ ಹಾಗೂ ಪಾಪದಿಂದ ಕೂಡಿದ್ದರೆ ವಿಕ್ರತಾಕಾರನಾಗಿರುತ್ತಾನೆ. ಎಂಬುದಾಗಿ ಬಹುಜನರ ನಂಬಿಕೆ ಇದೆ. ನಿನ್ನ ಈ ಇಬ್ಬರು ಗಂಡುಮಕ್ಕಳು ಈ ತೀರ್ಥದಲ್ಲಿ ಮುಳುಗಿ ಏಳಲಿ. ನಾನೂಕೂಡ ನಿನ್ನನ್ನು ಸ್ಮರಿಸಿ ಮುಳುಗಿ ಏಳುತ್ತೇನೆ. ನಿನ್ನ ಈ ಗಂಡುಮಕ್ಕಳು ತೀರ್ಥದಲ್ಲಿ ಮುಳುಗಿ ಎದ್ದ ನಂತರ ಮೊದಲಿನ ಆಕಾರದಲ್ಲೇ ಇದ್ದರೆ ಇವರು ನಿನ್ನ ಮಕ್ಕಳು ನಿನಗೆ ಹುಟ್ಟಿದವರು.ವಿಕಾರ ರೂಪದಿಂದಿದ್ದರೆ ಇವರು ಅನ್ಯರಿಗೆ ಹುಟ್ಟಿದವರೆಂದು ತಿಳಿ. ಅದೇರೀತಿ ನನ್ನನ್ನೂ ತಿಳಿ' ಎಂದು ತನ್ನ ನಿಶ್ಚಯವನ್ನು ತಿಳಿಸಿದಳು.

ಮಗಳ ಮಾತಿನಂತೆ ಗೌತಮ ಮುನಿ ಇಬ್ಬರು ಗಂಡು ಮಕ್ಕಳನ್ನು ಏಕಕಾಲಕ್ಕೆ ಸೋಮತೀರ್ಥದಲ್ಲಿ ಮುಳುಗಿಸಿದನು. ನೀರಿನಲ್ಲಿ ಮುಳುಗಿಸಿ ಮೇಲೆತ್ತಲು ಇಬ್ಬರೂ ಕಪಿಗಳಾಗಿ ಮೇಲೆದ್ದರು. ತಂದೆಯ ಮಾತಿನಂತೆ ಮಗಳೂ ಈ ತೀರ್ಥದಲ್ಲಿ ಮುಳುಗಿ ಮೇಲೆದ್ದಳು. ಮೊದಲ ಆಕಾರದಂತೆಯೇ ಇನ್ನೂ ಹೆಚ್ಚಿನ ತೇಜಸ್ಸಿನವಳಾಗಿ ಮೇಲೆದ್ದಳು. ಇದನ್ನು ಕಂಡ ಗೌತಮ ಮುನಿಗೆ ಇರುಸುಮುರುಸಾಯಿತು. ಗೌತಮನ ಮಕ್ಕಳು ಕಪಿಗಳಾದರೆಂದು ಯಾತ್ರಿಕರು ಗುಸುಗುಸು ಮಾತನ್ನಾಡಿಕೊಳ್ಳುತ್ತಿದ್ದಾರೆ. ಮಗಳ ಮಾತು ಸತ್ಯವೆಂದು ಗೌತಮಮುನಿಗೆ ಅರಿವಾಯಿತು. ಜಾತ್ರೋತ್ಸವ ಮುಗಿಸಿ ಮಕ್ಕಳೊಡನೆ ಮನೆಗೆ ಹಿಂದಿರುಗಿದನು, ಕುರೂಪದಿಂದ ಬರುತ್ತಿದ್ದ ತನ್ನ ಮಕ್ಕಳನ್ನು ನೋಡಿ ಅಹಲ್ಯಾದೇವಿ ನಾಚಿ ತಲೆತಗ್ಗಿಸಿದಳು. ಈ ಇಬ್ಬರು ಗಂಡುಮಕ್ಕಳು ದೇವೇಂದ್ರ ಹಾಗೂ ಸೂರ್ಯರಿಗೆ ಹುಟ್ಟಿದವರೆಂದು ತನ್ನ ದಿವ್ಯದೃಷ್ಠಿಯಿಂದ ನೋಡಿ ನೋಡಿ ಆಹಲ್ಯಾದೇವಿಗೆ 'ಕಲ್ಲಾಗು' ಎಂಬುದಾಗಿ ಗೌತಮ ಮುನಿ ಶಾಪನೀಡಿದನು. ಆಹಲ್ಯೆಯು ಭಯದಿಂದ ಶಾಪವಿಮೋಚನೆಗಾಗಿ ಪರಿಪರಿಯಾಗಿ ಬೇಡಿಕೊಂಡಳು. ಕೊನೆಗೆ ಮುನಿ ಅನುಗ್ರಹಿಸಿ ತೇತ್ರಾಯುಗದಲ್ಲಿ ರಾಮನ ಪಾದದ ಧೂಳು ಸೋಂಕಿದಾ ಕ್ಷಣ ನೀನು ಪಾಪವಿಮೋಚನೆ ಹೊಂದುವೆ ಎಂದು ಹೇಳಿ ತಪಸ್ಸಿಗೆ ತೆರಳಿದನು. ಈ ಎರಡು ಗಂಡುಮಕ್ಕಳು ಅಮ್ಮನೊಡನೆ ಚೇಷ್ಟೆಮಾಡತೊಡಗಿದರು. ಒಬ್ಬ ಅಮ್ಮನ ಜೆಡೆ ಹಿಡಿದು ಜೋಲಾಡಿದವ 'ವಾಲಿ'ಯಾದ (ವಾಲ ಎಂದರೆ ಜಡೆ). ಮತ್ತೊಬ್ಬ ಅಮ್ಮನ ಕೊರಳನ್ನ ತಬ್ಬಿ ಆಟವಾಡಿದವ 'ಸುಗ್ರೀವ'ನಾದ (ಗ್ರಿವ ಎಂದರೆ ಕುತ್ತಿಗೆ) ಮಕ್ಕಳನ್ನು ನೋಡಿ ಅಹಲ್ಯೆ ತುಂಬ ದು:ಖಿತಪ್ತಳಾದಳು. 'ಅಜ್ಞಾನದಿಣದ ಮಾಡಲ್ಪಟ್ಟ ಕರ್ಮವನ್ನು ನೀನು ಏಳಕೇಳದೆ ಬಯಲುಮಾಡಿದೆ. ನೀನೂ ಕಪಿಯಾಗು' ಎಂದು ಮಗಳಿಗೆ ಶಾಪನೀಡಿ ಆಹಲ್ಯೆ ಕಲ್ಲಾದಳು. ಹೀಗೆ ಶಾಪದಿಂದ ಕಪಿಯಾದವಳೇ 'ಅಂಜನಾದೇವಿ' ಅಂದರೆ ಅಂಜನಾದೇವಿಯ ಜನ್ಮಸ್ಥಳ ಕರ್ನಾಟಕದ ಕೊಪ್ಪಳ ಜಿಲ್ಲೆ ಶಿವಪುರ ಪ್ರದೇಶ.

**ಕಿಷ್ಕಿಂಧಾ ಪಟ್ಟಣ ನಿರ್ಮಾಣ :**

ಗೌತಮ ಮುನಿ ಹಾಗೂ ಆತನ ಕಿರಿಯ ಪತ್ನಿ ಅಹಲ್ಯಾದೇವಿಯ ಗಂಡುಮಕ್ಕಳಿಬ್ಬರು ಸೋಮತೀರ್ಥ ಮಹಿಮೆಯಿಂದ ಕಪಿರೂಪಿಗಳಾದರು ಅವರೇ ವಾಲಿ ಹಾಗೂ ಸುಗ್ರೀವರು. ತಾಯಿಯ ಮಾತಿನಂತೆ ಅರಣ್ಯದಲ್ಲಿ ತಿರುಗಾಡುತ್ತಿದ್ದಾಗ, ನಾರದರ ದರ್ಶನವಾಗುತ್ತದೆ. ನಮ್ಮನ್ನು ರಕ್ಷಿಸು ಎಂಬುದಾಗಿ ನಾರದರಲ್ಲಿ ಮೊರೆಹೋಗುತ್ತಾರೆ.

ವಾಲಿ ಸುಗ್ರೀವರ ಪೂರ್ವೇತಿಹಾಸ ತಿಳಿದಿದ್ದ ನಾರದರು (ದೇವೇಂದ್ರ–ಸೂರ್ಯರ ಮಕ್ಕಳು) ನೀವುಗಳು ಹೇಮಕೂಟದಲ್ಲಿ ಕುಳಿತು ಶ್ರೀ ವಿರೂಪಾಕ್ಷನನ್ನು ಕುರಿತು ತಪಸ್ಸುಮಾಡಿ ಎಂಬುದಾಗಿ

ಸೂಚಿಸುತ್ತಾರೆ.ಅದರಂತೆ ಅವರಿಬ್ಬರೂ ಹೇಮಕೂಟಕ್ಕೆ ಬಂದು ತಪಸ್ಸು ಮಾಡಲು ಪ್ರಾರಂಭಿಸುತ್ತಾರೆ. ಇವರ ಕಠಿಣ ತಪಸ್ಸಿಗೆ ಶಿವನು ಮೆಚ್ಚಿ ಪ್ರತ್ಯಕ್ಷನಾಗಿ 'ಮಕ್ಕಳೆ ನೀವು ಸಕಲೈಶ್ವರ್ಯ ಸಂಪನ್ನರಾಗಿ. ಬಲಶಾಲಿಗಳಾಗಿ' ಎಂಬುದಾಗಿ ವರನೀಡಿ ವಿಶ್ವಕರ್ಮನನ್ನು ಕರೆದು ಇವರಿಬ್ಬರ ಸುಖವಾಸಕ್ಕೆ ಉತ್ತಮ ಪಟ್ಟಣ ನಿರ್ಮಿಸುವಂತೆ ಆದೇಶಿಸುತ್ತಾನೆ. ಆ ವಿಶ್ವಕರ್ಮನಿಂದ ಸೃಷ್ಠಿಯಾದದ್ದೇ ಈ 'ಕಿಷ್ಕಿಂಧಾ ಪಟ್ಟಣ' ಈ ಪಟ್ಟಣದ ಯುವರಾಜನಾಗಿ ವಾಲಿ ಕಾರ್ಯಾರಂಭ ಮಾಡುತ್ತಾನೆ.

**ದುಂದುಭಿ ಗುಹೆ**

ಈ ಸ್ಥಳವು ಚಕ್ರತೀರ್ಥದ ಸಮೀಪದಲ್ಲಿದೆ. ನದಿಯ ತೀರದಲ್ಲಿ, ಇದಕ್ಕೆ ಸಂಬಂಧಿಸಿದಂತೆ ಒಂದು ಕಥೆ ಇದೆ. ಪಂಚ ಕನ್ಯೆಯರಲ್ಲಿ ಒಬ್ಬಳಾದ ತಾರಾದೇವಿಯನ್ನು, ಸುಗ್ರೀವನ ಸಾಹಸ ಮತ್ತು ಬುದ್ಧಿವಂತಿಕೆಗೆ ಮೆಚ್ಚಿ, ಅವಳ ತಂದೆ ತಾಯಿಗಳು ಸುಗ್ರೀವನಿಗೆ ಮದುವೆ ಮಾಡಿಕೊಡುತ್ತಾರೆ. ಒಮ್ಮೆ ತಾರಾದೇವಿ ಮತ್ತು ಸುಗ್ರೀವ ವಿಹಾರಕ್ಕೆಂದು ಹಂಪಿಯ ನದಿತೀರದಲ್ಲಿ ಅಡ್ಡಾಡುತಿರುತ್ತಾರೆ. ಆಗ ತಾರೆಯನ್ನು ಕಂಡು ಮೋಹಿಸಿದ ದುಂದುಭಿ ಎಂಬ ರಾಕ್ಷಸ ಆಕೆಯನ್ನು ಪಡೆಯಲು ಸುಗ್ರೀವನೊಡನೆ ಯುದ್ಧ ಮಾಡುತ್ತಾನೆ. ಇವರಿಬ್ಬರ ಸೆಣಸಾಟ ದೃಶ್ಯ ಕಂಡು ಸುಗ್ರೀವನನ್ನು ಕಾಪಾಡಲು ಅವರ ಅಣ್ಣನಾದ ವಾಲಿಯು ಬರುತ್ತಾನೆ. ದೂರದಿಂದಲೇ ವಾಲಿಯನ್ನು ನೋಡಿದ ದುಂದುಭಿಯು ಪಕ್ಕದಲ್ಲಿ ಇದ್ದ ಗುಹೆಯೊಂದರ ಒಳಹೊಕ್ಕು ಅಡಗಿ ಕುಳಿತನು. ಆಗ ಅಲ್ಲಿಗೆ ಬಂದ ವಾಲಿಯು ಸುಗ್ರೀವನನ್ನು ನಡೆದ ಘಟನೆಯ ಬಗ್ಗೆ ಕೇಳಿದಾಗ, ಸುಗ್ರೀವನು ನಡೆದದ್ದನ್ನೆಲ್ಲ ತಿಳಿಸಿದನು. ಅದನ್ನು ಕೇಳಿ ಕೋಪಿಸಿಕೊಂಡ ವಾಲಿ ಆ ಗುಹೆಯೊಳಗೆ ನುಗ್ಗಿ ಅಡಗಿಕುಳಿತಿದ್ದ ದುಂಧುಬಿಯನ್ನು ಕೊಲ್ಲುತ್ತಾನೆ. ಆದ್ದರಿಂದ ಈ ಗುಹೆಗೆ ದುಂಧುಬಿ ಗುಹೆಯೆಂದು ಕರೆಯುತ್ತಾರೆ.

ವಾಲಿ ಹಾಗೂ ಸುಗ್ರೀವರಂತೆ  ಅತಿ ಬಲಶಾಲಿಯಾದ ವ್ಯಕ್ತಿಗಳಲ್ಲಿ ದುಂದುಬಿ ಕೂಡ ಒಬ್ಬ. ಒಮ್ಮೆ ಮದೋನ್ಮತ್ತನಾದ ದುಂದುಬಿ ಕಿಷ್ಕಿಂಧೆಗೆ ಬಂದು  ವಾಲಿಯನ್ನ ಯುದ್ಧಕ್ಕೆ ಕರೆಯುತ್ತಾನೆ. ಹೀನಾಯ ಮಾತುಗಳಿಂದ ವಾಲಿಯನ್ನು ಯುದ್ಧ ಮಾಡುವಂತೆ ಕೆರಳಿಸುತ್ತಾನೆ. ಗರ್ವದ ನುಡಿಗಳನ್ನು ಕೇಳಿ ಸಹಿಸಲಾರದ ವಾಲಿ ಸುಗ್ರೀವ ಸಹಿತನಾಗಿ ಕಿಷ್ಕಿಂಧಾ ಪಟ್ಟಣದಿಂದ ಹೊರಬರುತ್ತಾನೆ. ದುಂದುಬಿ ಹಾಗೂ ವಾಲಿಯ ನಡುವೆ ಭೀಕರ ಯುದ್ಧ ನಡೆಯುತ್ತದೆ. ವಾಲಿಯ ಶಕ್ತಿಯ ಮುಂದೆ ದುಂದುಬಿ ನಿಲ್ಲಲಾರದೆ ಹೆದರಿ ಮತಂಗ ಪರ್ವತದ ಗವಿಯೊಳಗೆ ಸೇರಿಕೊಳ್ಳುತ್ತಾನೆ. ಆ ವೇಳೆಗೆ ವಾಲಿ ತಮ್ಮನಾದ ಸುಗ್ರೀವನನ್ನು ಕುರಿತು ' ಎಲ್ಲೆ ತಮ್ಮನೆ ನಾನು ದುಂದುಬಿಯನ್ನು ಕೊಂದು ಬರುತ್ತೇನೆ.ನೀನು ಈ ಗವಿಯ ದ್ವಾರದಲ್ಲೇ ಇರು ' ಎಂಬುದಾಗಿ ಹೇಳಿ ಗವಿಯೊಳಗೆ ಹೋಗುತ್ತಾನೆ. ಒಂದು ತಿಂಗಳ ಕಾಲ ಯುದ್ಧ ನಡೆಯುತ್ತದೆ.  ಗುಹೆಯ ದ್ವಾರದಿಂದ ರಕ್ತ ಹರಿಯಿತು. ಗುಹೆಯಲ್ಲಿ ವಾಲಿ ಹತನಾಗಿರಬಹುದೆಂದು ಸುಗ್ರೀವ ದು:ಖಿತನಾಗಿ ಗುಹೆಯ ದ್ವಾರಕ್ಕೆ ಒಂದು ದೊಡ್ಡ ಬಂಡೆಯನ್ನು ಮುಚ್ಚಿ ಪಟ್ಟಣಕ್ಕೆ ಬಂದು ಕ್ರಿಯಾವಿಧಿಗಳನ್ನು ಮುಗಿಸಿ ಸಾಮ್ರಾಜ್ಯದ ನಾಯಕನಾಗಿ ಆಡಳಿತ ನಡೆಸುತ್ತಿದ್ದನು.

ಇತ್ತ ದುಂದುಬಿಯನ್ನು ಸಂಹರಿಸಿ ವೇಗವಾಗಿ ಗುಹೆಯಿಂದ ಹೊರಬಂದ ವಾಲಿಯು ಗುಹೆಯ ದ್ವಾರಕ್ಕೆ ಬಂದನು. ಗುಹೆಯ ಬಾಗಿಲಿಗೆ ಅಡ್ಡ ಇಟ್ಟಿದ್ದ ಬೃಹತ್ ಬಂಡೆಯನ್ನು ನೋಡಿ ಕೋಪದಿಂದ ಅದನ್ನು ಕಾಲಿನಿಂದ ಪುಡಿ ಪುಡಿ ಮಾಡಿದ.ಕಿಷ್ಕಿಂಧಾ ಪಟ್ಟಣಕ್ಕೆ ಬಂದು ತಮ್ಮನನ್ನು ನೋಡಿ ಸಿಟ್ಟಿನಿಂದ

ಆತನನ್ನು ಹೊಡೆದು ಪರ್ವತದಾಚೆಗೆ ತಳ್ಳಿದನು. ಸುಗ್ರೀವನು ಅತಾಶನಾಗಿ ಕಿಷ್ಕಿಂಧಾ ಪಟ್ಟಣದಿಂದ ಹೊರಬಂದು ಸಮೀಪದ ಋಷ್ಯಮುಖ ಪರ್ವತಕ್ಕೆ ಬಂದು ಗೌಪ್ಯವಾಗಿ ವಾಸಿಸತೊಡಗಿದನು.

**ಹನುಮನ ಸೆಳವು**

ಹಂಪಿಯನ್ನು ಪುರಾತನ ಕಿಷ್ಕಿಂದೆ ಎಂದು ಭಾವಿಸಲಾಗುತ್ತಿದೆ. ಪುರಾತನ ಕಿಷ್ಕಿಂದೆಗೆ ಸಂಬಂಧಿಸಿದಂತೆ ಅನೇಕ ಐತಿಹ್ಯಗಳು ಇಲ್ಲಿ ಪ್ರಚಲಿತದಲ್ಲಿವೆ. ಅದರಲ್ಲಿ ಹನುಮನ ಸೆಳವು ಮುಖ್ಯವಾದುದು. ಈ ಸ್ಥಳದಲ್ಲಿ ಹನುಮನ ಹುಟ್ಟಿದ ಎಂಬುದನ್ನು ಗಟ್ಟಿಗೊಳಿಸುತ್ತದೆ. ಇದಕ್ಕೆ ಸಂಬಂಧಿಸಿದ ಒಂದು ಕಥೆ ಈ ರೀತಿ ಇದೆ.

ಹನುಮಂತನ ತಾಯಿ ಅಂಜನದೇವಿ ಹಂಪಿ ಹೊಳೆಯ ಪಕ್ಕದಲ್ಲಿರುವ ಅಂಜನಾದ್ರಿ ಪರ್ವತದಲ್ಲಿ ವಾಸಿಸುತ್ತಿದ್ದಳು. ಕಾಲ ಕಲೆಯುತ್ತಿರುವಾಗ ಆಕೆ ಗಾಳಿಯ ಸಹವಾಸದಿಂದ ಹನುಮಂತನಿಗೆ ಜನ್ಮ ನೀಡುತ್ತಾಳೆ. ಜನ್ಮ ನೀಡಿದ ವೇಳೆಯಲ್ಲಿ ತನ್ನ ದೇಹವನ್ನು ತೊಳೆಯಲು ಆಕೆಗೆ ನೀರು ಬೇಕಾಗಿತ್ತು. ಆದರೆ ಆಕೆಯ ಮನೆ ಇರುವುದು ಬೆಟ್ಟದ ಮೇಲೆ. ಮೊದಲೇ ತಂದು ಇಟ್ಟುಕೊಂಡಿದ್ದ ನೀರು ಮುಗಿದಿತ್ತು. ಇಂತಹ ವೇಳೆಯಲ್ಲಿ ಅಂಜನಾದೇವಿ ಚಿಂತಾಕ್ರಾಂತಳಾಗಿ ಕುಳಿತಿರುವಾಗ ಬಾಲಹನುಮಂತನು ಬೆಟ್ಟವನ್ನು ಇಳಿದುಬಂದು ಹರಿಯುವ ಹೊಳೆಗೆ ತನ್ನ ಕೈಯನ್ನು ಅಡ್ಡಮಾಡಿ, ಅಂಜನಾದ್ರಿ ಬೆಟ್ಟದ ಕಡೆಗೆ ಸ್ವಲ್ಪ ನೀರು ಹರಿದುಹೋಗುವಂತೆ ಮಾಡುತ್ತಾನೆ. ಅಂದಿನಿಂದ ಹಂಪಿ ಹೊಳೆಯು ಋಷ್ಯಮೂಕ ಪರ್ವತವನ್ನು ಬಳಸಿ ಎರಡು ಭಾಗವಾಗಿ ಹರಿಯಲು ಆರಂಭಿಸಿತು. ಮೊದಲು ವಿರೂಪಾಕ್ಷ ದೇವಸ್ಥಾನದ ಇದಿರು ಭಾಗದಲ್ಲಿ ಮಾತ್ರ ಹರಿಯುತ್ತಿದ್ದ ಹಂಪಿ ಹೊಳೆ ಈ ಘಟನೆಯ ನಂತರ ಋಷ್ಯಮೂಕ ಪರ್ವತದ ಎಡಬಲಗಳಲ್ಲಿ ಹರಿಯತೊಡಗಿತು. ಹೀಗೆ ಹಂಪಿ ಹೊಳೆಯು ಎರಡು ಭಾಗವಾಗಿ ಅಂಜನಾದ್ರಿ ಬೆಟ್ಟದ ಕಡೆಗೆ ಹರಿಯುವ ನದಿಯ ಕವಲನ್ನು ಹನುಮನ ಸೆಳವು ಎಂಬುದಾಗಿ ಕರೆಯುತ್ತಾರೆ.

**ವಾಲಿ ಭಂಡಾರ**

ಈ ವಾಲಿಭಂಡಾರದ ಜಾಗಕ್ಕೆ ಯಾವುದೇ ಪ್ರವೇಶದ್ವಾರಗಳಿಲ್ಲ. ಇಲ್ಲಿ ವಾಲಿಯು ತನ್ನ ಸಕಲ ಸಂಪತ್ತನ್ನು ಕೂಡಿಟ್ಟಿದ್ದಾನೆ ಎಂದು ಜನ ನಂಬುತ್ತಾರೆ. ಹಾಗೆ ಕೂಡಿಟ್ಟ ಗುಹೆಯ ಬಾಗಿಲಿಗೆ ವಾಲಿ ದೊಡ್ಡ ಬಂಡೆಯನ್ನು ಇರಿಸಿದ್ದಾನಂತೆ. ವಾಲಿಯಷ್ಟೇ ಬಲಶಾಲಿಯಾದ ಇನ್ನಾರೋ ಒಬ್ಬ ಆ ಕಲ್ಲಿಗೆ ಒದ್ದಾಗ ಮಾತ್ರ ಆ ಬಂಡೆ ಪಕ್ಕಕ್ಕೆ ಸರಿದು, ಸಂಪತ್ತು ಕಾಣಿಸಿಕೊಳ್ಳುತ್ತದೆ ಎಂದು ಸ್ಥಳೀಯ ಜನರು ಹೇಳುತ್ತಾರೆ.

ಈ ವಾಲಿಭಂಡಾರದ ಬಗೆಗೆ ಇನ್ನೊಂದು ಐತಿಹ್ಯವಿದೆ. ಅದರ ಪ್ರಕಾರ ಹಿಂದೆ ಆನೆಗೊಂದಿ ಗೌಡರ ಮನೆಯ ಹಸುವೊಂದು ಕರು ಹಾಕಿತು. ಅದರ ಕೆಚ್ಚಲಿನಲ್ಲಿ ಒಂದು ತೊಟ್ಟೂ ಹಾಲು ಬರುತ್ತಿರಲಿಲ್ಲ. ಗೌಡರಿಗೆ ಈ ವಿಷಯ ತಿಳಿಯಿತು. ಅವರು ತಮ್ಮ ಮನೆಯಲ್ಲಿ ದನ ಕಾಯುತ್ತಿದ್ದ ಜೀತದ ಹಾಳನ್ನು ಕರೆದು 'ನೀನೇ ಎಲ್ಲೋ ಹಾಲು ಕರೆದು ಮಾರ್‍ಕೋಂತಿಯ' ಎಂದು ದನ ಕಾಯುವ ಹುಡುಗ ಆ ದಿವಸ ಹಸುವನ್ನು ಕಣ್ಣಲ್ಲಿ ಕಣ್ಣಿಟ್ಟು ಕಾಯುತ್ತಿರುತ್ತಾನೆ. ಸಂಜೆ ಹೊತ್ತು ಹೊಟ್ಟೆ ತುಂಬ ಮೇಯ್ದು ಹಸು ತನ್ನ ದನಗಳನ್ನು ಬಿಟ್ಟು ಬಿರಬಿರನೆ ವಾಲಿಭಂಡಾರದ ಗವಿಯ ಬಾಗಿಲ ಮಾರ್ಗವಾಗಿ ಒಳಗೆ ಹೋಗುತ್ತಿದ್ದಂತೆಯೇ, ಅದರ ಬಾಲವನ್ನು ಹಿಡಿದು ಈ ದನಕಾಯುವ ಹುಡುಗನೂ ಕತ್ತಲ ಗವಿಯೊಳಕ್ಕೆ ಹೊರಟು ಹೋದ. ಸುಮಾರು ದೂರ ಕ್ರಮಿಸಿದ ಹಸುವು ಗವಿಯೊಳಗಿನ ಶಿವಲಿಂಗಕ್ಕೆ

ಹಾಲನ್ನು ಸುರಿಸಿ ಮತ್ತೆ ವಾಪಸಾಯಿತು. ಅದರೊಂದಿಗೇ ಹಿಂದಿರುಗಿದ ಹುಡುಗನಿಗೆ ಒಬ್ಬ ಮುದುಕ ಕಾಣಿಸಿಕೊಂಡು 'ಈ ವಿಷಯವನ್ನು ಯಾರಿಗೂ ಹೇಳಕೂಡದು. ಹೇಳಿದರೆ ನಿನ್ನ ತಲೆ ಒಡೆದು ಹೋಳಾಗಿ ಬಿಡುತ್ತದೆ' ಎಂದು ಹೇಳಿ ದ್ರವ್ಯದ ಗಂಟೊಂದನ್ನು ಕೊಟ್ಟನಂತೆ. ಅದಕ್ಕೆ ತಲೆಯಾಡಿಸಿದ ಹುಡುಗ ಹಿಂದೆ ಮನೆಗೆ ಬಂದು ಕೈಯಲ್ಲಿರುವ ಗಂಟನ್ನು ತಂದೆ ತಾಯಿಗಳಿಗೆ ಕೊಟ್ಟನಂತೆ. ಪರಿಣಾಮವಾಗಿ ತಂದೆ ತಾಯಿಗಳ ದಾರಿದ್ರ್ಯ ಹೋಯಿತು. ಮಗನನ್ನು ದನ ಕಾಯುವ ಕೆಲಸದಿಂದ ಬಿಡಿಸಿದರು. ಊರವರಿಗೆ ಸಂಶಯ ಬಂತು. ತಂದೆ ತಾಯಿಯರನ್ನು ಕೇಳಿದರೆ ಏನೂ ಉತ್ತರ ದೊರಕಲಿಲ್ಲ. ಹುಡುಗನನ್ನು ಕೇಳಿದರೆ ಆತನೂ ತಕ್ಷಣ ಏನೂ ಹೇಳಲಿಲ್ಲ. ಕೊನೆಗೆ ಅವನಿಗೆ ಶಿಕ್ಷೆ ಕೊಟ್ಟರು. ಈಗ ಹುಡುಗ ನಡೆದುದನ್ನು ಹೇಳಿದ. ತಕ್ಷಣ ಅವನ ತಲೆ ಒಡೆದು ಹೋಳಾಯಿತು. ಹೋಳುಗಳು ಕಲ್ಲಾದವು. 'ಈ ಕಲ್ಲಿನ ತಲೆಯನ್ನು ವಾಲಿ ಭಂಡಾರದ ಸುತ್ತಮುತ್ತ ಈಗಲೂ ಕಾಣಬಹುದು' ಎಂದು ಜನರು ಹೇಳುತ್ತಾರೆ.

**ಸುಗ್ರೀವ ಗುಹೆ**

ಕೋದಂಡರಾಮನ ಗುಡಿಯಿಂದ ವಿಠಲದೇವರ ಗುಡಿಗೆ ಹೋಗುವ ಹಾದಿಯಲ್ಲಿ ಎಡಭಾಗಕ್ಕೆ ಕಂಡುಬರುವ ಒಂದು ಗುಹೆಗೆ ಸುಗ್ರೀವ ಗುಹೆ ಎಂದು ಹೆಸರಿದೆ. ಈ ಗುಹೆಯಲ್ಲಿ ರಾಮಲಕ್ಷ್ಮಣ ಸೀತೆಯರ ಉಬ್ಬುಚಿತ್ರಗಳನ್ನು ಕೆತ್ತಲಾಗಿದೆ. ಸುಗ್ರೀವನು ಈ ಗುಹೆಯಲ್ಲಿ ವಾಸವಾಗಿದ್ದನೆಂದು ಜನರು ಹೇಳುತ್ತಾರೆ. ವಾಲಿಯೂ ಕೆಲವು ಕಾಲ ಈ ಗುಹೆಯಲ್ಲಿ ಇದ್ದನಂತೆ. ಸೀತೆಯನ್ನು ಈ ಗುಹೆಯ ಮಾರ್ಗವಾಗಿಯೇ ಎಳೆದುಕೊಂಡು ಹೋಗಲಾಯಿತು ಆದ್ದರಿಂದಲೇ ಸುಗ್ರೀವನ ಗುಹೆಯ ಪ್ರವೇಶ ದ್ವಾರದ ಮೂಲಕವೇ ಹಾಸು ಬಂಡೆಯ ಮೇಲೆ ಸೀತೆಯ ಸೆರಗಿನ ಗೆರೆಗಳು ಮೂಡಿವೆ ಎಂಬುದಾಗಿ ಹೇಳುತ್ತಾರೆ.

**ವಾಲಿಕಾಷ್ಠ**

ಹಂಪಿಯ ಪರಿಸರದಲ್ಲಿ ಕಂಡುಬರುವ ವೆಂಕಟಾಪುರ ಗ್ರಾಮದ ಸಮೀಪದಲ್ಲಿ ಗದ್ದೆಗಳ ನಡುವೆ ಕಂಡುಬರುವ ಸುಮಾರು ಐದು ಗುಂಟೆ ವಿಸ್ತೀರ್ಣ ಹೊಂದಿರುವ ಎತ್ತರವಾದ ಸುಣ್ಣಕಲ್ಲಿನ ಅಥವಾ ಬೂದಿ ದಿಬ್ಬವನ್ನು ವಾಲಿಕಾಷ್ಠ ಎಂದು ಕರೆಯುತ್ತಾರೆ. ಈ ಪ್ರದೇಶದಲ್ಲಿರುವ ಆನೆಗೊಂದಿಯ ನದಿತೀರದ ಚಿಂತಾಮಣಿಮಠದ ಕಲ್ಲುಬಂಡೆಯ ಮೇಲೆ ನಿಂತು ಶ್ರೀರಾಮನು ವಾಲಿಯನ್ನು ಕೊಂದನಂತೆ. ಹೀಗೆ ಕೊಲ್ಲಲ್ಪಟ್ಟ ವಾಲಿಯ ಶವವನ್ನು ಹೊಳೆದಾಟಿಸಿ ತಂದು ಈ ಸ್ಥಳದಲ್ಲಿ ಸುಡಲಾಯಿತು. ಹೀಗೆ ಸುಟ್ಟ ವಾಲಿಯ ಶರೀರಿದ ಎಲುಬುಗಳು ಈಗಲೂ ಹಾಗೆಯೇ ಉಳಿದಿವೆ ಎಂದು ಜನರು ಹೇಳುತ್ತಾರೆ. ಅಸ್ತಿಪಂಜರದ ಆಕಾರದಲ್ಲಿ ಈ ದಿಬ್ಬ ಇರುವುದೆಂದೂ ಜನ ಭಾವಿಸುತ್ತಾರೆ. ಹೀಗೆ ಈಗಲೂ ಸಹ ಹಲವಾರು ಸಂತರು ಮತ್ತು ಭಕ್ತರು ಈ ಸ್ಥಳಕ್ಕೆ ಭೇಟಿ ನೀಡಿ ಪೂಜೆ ಸಲ್ಲಿಸುತ್ತಿದ್ದಾರೆ.

**ಅಂಜನಾದ್ರಿ ಪರ್ವತ**

ಹನುಮಂತ ತಾಯಿ ಅಂಜನಾದೇವಿಯು ಈ ಪರ್ವತದಲ್ಲಿ ವಾಸವಾಗಿದ್ದಳೆಂದು ಜನರು ಹೇಳುತ್ತಾರೆ. ಹಂಪಿ ಹೊಳೆಯ ಎಡದಂಡೆಗೆ ಕಂಡುಬರುವ ಹನುಮನಹಳ್ಳಿಯ ಸಮೀಪದ ಈ ಪರ್ವತದಲ್ಲಿ ಇಂದು ಅನೇಕ ಸಂತರು ನೆಲೆಸಿದ್ದಾರೆ. ಅಂಜನಾದೇವಿ ಈ ಪರ್ವತದಲ್ಲಿ ವಾಸವಾಗಿದ್ದುದರಿಂದ ಈ ಪರ್ವತಕ್ಕೆ ಅಂಜನಾದ್ರಿ ಪರ್ವತ ಎಂದು ಹೆಸರು ಬಂತೆಂಬ ನಂಬಿಕೆ

ಸಾರ್ವತ್ರಿಕವಾಗಿದೆ. ಹನುಮಂತನ ಜನ್ಮಸ್ಥಳ ಇದು. ಅನೇಕ ಜನಪದ ಕಾವ್ಯಗಳು, ಸ್ಥಳಪುರಾಣಗಳು, ಐತಿಹ್ಯಗಳು ಇದನ್ನು ದೃಢಪಡಿಸುತ್ತವೆ. ಅಂಜನಾದೇವಿ ಹನುಮಂತನನ್ನು ಹಡೆದ ಮೇಲೆ ಆಕೆಗೆ ಕುಡಿಯಲು ಹಾಗೂ ದೇಹವನ್ನು ಸ್ವಚ್ಛಗೊಳಿಸಿಕೊಳ್ಳಲು ನೀರು ಬೇಕಾದಾಗ ಹನುಮಂತನೇ ಇಲ್ಲಿ ನೀರು ಒದಗಿಸಿಕೊಟ್ಟಿದ್ದನ್ನು ಜನಪದ ಕವಿಗಳು ತಮ್ಮ ಮೌಖಿಕ ಪರಂಪರೆಯ ತ್ರಿಪದಿಗಳಲ್ಲಿ ಹೀಗೆ ದಾಖಲಿಸಿದ್ದಾರೆ.

*ಅಡವ್ಯಾಗಂಜನದೇವಿ ಹನುಮಾನ ಹಡೆದಾಳೆ*
*ತೊಡೆಯ ತೊಳೆಯೋಕ ನೀರಿಲ್ಲ: । ಹನುಮಣ್ಣ*
*ಸುತ್ತಲ ಹೊಳೆಯ ತಿರುವ್ಯಾನೆ ॥*

**ಹನುಮನ ಜನನ**

ಅಂಜನಿಯು ಚೈತ್ರಮಾಸನ ಶುಕ್ಲಪಕ್ಷದ ಹುಣ್ಣಿಮೆಯ ದಿನ ಶುಭ ಮುಹೂರ್ತದಲ್ಲಿ ಸೂರ್ಯಪ್ರಕಾಶಕ್ಕೆ ಸಮಾನವಾದ ಶಿವ ತೇಜಸ್ಸುಳ್ಳ ಒಂದು ಗಂಡುಮಗುವನ್ನು ಹೆತ್ತಳು. ಆ ಪುತ್ರನು ಜನಿಸುವಾಗಲೇ ನವರತ್ನ ಖಚಿತವಾದ ಕೀರಿಟದಿಂದಲೂ ವಜ್ರದ ಕರ್ಣಾಭರಣದಿಂದಲೂ ಭುಜ ಕೀರಿಟಗಳಿಂದಲೂ ವಜ್ರಾಯುಧಕ್ಕೆ ಸಮಾನವಾದ ಗದೆಯಿಂದಲೂ ಕೂಡಿ ಪ್ರಕಾಶಿಸುತ್ತಿದ್ದನು. ಶಿವತೇಜೀಮಯ ಶಿಶುವನ್ನು ನೋಡಿ ವಾನರ ಕುಲವೆಲ್ಲಾ ಆನಂದಪಟ್ಟಿತು. ಆ ಪುತ್ರನನ್ನು ಆಂಜನೇಯನೆಂದು ಕರೆಯತೊಡಗಿದರು.

ಒಂದು ದಿನ ಆಂಜನೇಯನು ಪೂರ್ವದಿಕ್ಕಿನಲ್ಲಿ ಉದಯಿಸುತ್ತಿದ್ದ ಸೂರ್ಯನನ್ನು ಕಣ್ಣಿಂದು ಭ್ರಮಿಸಿ, ಗಗನಕ್ಕೆ ಹಾರಿ ಅವನನ್ನು ಹಿಡಿದು ತಿಂದನು. ಲೋಕವೆಲ್ಲಾ ಕಾರ್ಗತ್ತಲೆಯಲ್ಲಿ ಮುಳುಗಿತು. ಇದನ್ನು ಕಂಡ ಇಂದ್ರನು ತನ್ನ ಗದೆಯಿಂದ ಆಂಜನೇಯನ ಮುಖಕ್ಕೆ ಹೊಡೆದನು. ಆ ಹೊಡೆತದಿಂದ ಆಂಜನೇಯನು ಮೂರ್ಛಿತನಾಗಿ ಭೂಮಿಗೆ ಬಿದ್ದನು. ತನ್ನ ಮಗನ ಅವಸ್ಥೆಯನ್ನು ಕಂಡು ವಾಯುವು. ಆಂಜನೇಯನನ್ನು ಎತ್ತಿಕೊಂಡು ಹೋಗಿ ಮಹಾಕಾಲ ಲಿಂಗ ಸನ್ನಿಧಿಯಲ್ಲಿರಿಸಿ ಭಕ್ತಿಯಿಂದ ಶಿವನನ್ನು ಪ್ರಾರ್ಥಿಸಿದನು. ಲಿಂಗ ಸ್ಪರ್ಶವಾದೊಡನೆಯೇ ಆಂಜನೇಯನು ಎಚ್ಚೆತ್ತು ಮುಂದಿದ್ದ ಲಿಂಗಕ್ಕೆ ನಮಿಸಿ ಭಕ್ತಿಯಿಂದ ಪ್ರಾರ್ಥಿಸಿದನು. ಇದನ್ನು ಕಂಡು ಹರಿ–ಬ್ರಹ್ಮ–ಇಂದ್ರಾದಿ ದೇವತೆಗಳು ಅಲ್ಲಿಗೆ ಆಗಮಿಸಿ ನಾನಾ ಬಗೆಯಿಂದ ಶಿವನನ್ನು ಪ್ರಾರ್ಥಿಸಿದರು. ಶಿವನು ಅವರೆಲ್ಲರಿಗೂ ದರ್ಶನವಿತ್ತು "ಎಲೈ ಹನುಮಂತನೇ ! ಯಾವ ಆಯುಧದಿಂದಲೂ ನಿನಗೆ ಮರಣವಾಗದಿರಲಿ. ನೀನು ಅಜೇಯನೂ ಚಿರಂಜೀವಿಯೂ ಅರಿಭಯಂಕರನೂ ಮಿತ್ರರಿಗೆ ಅಭಯಪ್ರದನೂ ಶ್ರೀರಾಮನಿಗೆ ಪ್ರಿಯನೂ ಆಗು" ಎಂದು ಹರಸಿದನು. ಅಲ್ಲಿ ನೆರೆದಿದ್ದ ಇಂದ್ರಾದಿ ದೇವತೆಗಳಿಂದ ಬಗೆ ಬಗೆಯ ವರಗಳನ್ನು ಆಂಜನೇಯನು ಪಡೆದನು. ಪುನಃ ವಾಯುವು ಆಂಜನೇಯನನ್ನು ಪಂಪಾಕ್ಷೇತ್ರದಲ್ಲಿರುವ ಅಂಜನಾದ್ರಿಗೆ ಕರೆತಂದನು. ಮಗನಿಗೆ ಲಭಿಸಿದ ವರಗಳನ್ನು ತಿಳಿದು ಅಂಜನೀದೇವಿಯು ಹಿರಿ ಹಿರಿ ಹಿಗ್ಗಿದಳು. ಶಿವಾನುಗ್ರವನ್ನು ನೆನೆದು ಸುಖದಿಂದಿದ್ದಳು. ಮಾತಾಪಿತೃಗಳ ಸಲಹೆಯಂತೆ ಹನುಮಂತನು ಸೂರ್ಯದೇವನ ಬಳಿಗೆ ಹೋಗಿ ಸಕಲ ವೇದವೇದಾಂತ ಶಾಸ್ತ್ರಾದಿಗಳನ್ನೂ ಕುರಿತು ಪಾರಂಗತನಾದನು.

ಮುಂದೆ ಹನುಮಂತನು ತನ್ನ ಮಾತಾ ಪಿತೃಗಳ ಹಾಗೂ ಸೂರ್ಯದೇವನ ಅನುಜ್ಞೆಯನ್ನು ಪಡೆದು, ಸೂರ್ಯನ ಅಂಶದಿಂದ ಜನಿಸಿದ್ದ ಸುಗ್ರೀವನ ಬಳಿಗೆ ಹೋದನು. ಶಿವ ತೇಜಸ್ವಿಯೂ ಬ್ರಹ್ಮಚರ್ಯ ವ್ರತಿಯೂ ಆದ ಆಂಜನೇಯನ ಪ್ರತಿಭೆಯನ್ನು ಗುರ್ತಿಸಿ ಸುಗ್ರೀವನು ಅವನನ್ನು ತನ್ನ ಹನ್ನೆರಡು ಜನ ಮಂತ್ರಿಗಳಲ್ಲಿ ಒಬ್ಬನನ್ನಾಗಿ ಸ್ವೀಕರಿಸಿ ಮಂತ್ರಿ ಮಂಡಲಕ್ಕೆ ಸೇರಿಸಿಕೊಂಡನು.

**ಹನುಮನ ಜನನ**

ಅಂಜನಿಯು ಚೈತ್ರಮಾಸದ ಶುಕ್ಲಪಕ್ಷದ ಹುಣ್ಣಿಮೆಯ ದಿನ ಶುಭ ಮುಹೂರ್ತದಲ್ಲಿ ಸೂರ್ಯಪ್ರಕಾಶಕ್ಕೆ ಸಮಾನವಾದ ಶಿವ ತೇಜಸ್ಸುಳ್ಳ ಒಂದು ಗಂಡುಮಗುವನ್ನು ಹೆತ್ತಳು. ಆ ಪುತ್ರನು ಜನಿಸುವಾಗಲೇ ನವರತ್ನ ಖಚಿತವಾದ ಕೀರಿಟದಿಂದಲೂ ವಜ್ರದ ಕರ್ಣಾಭರಣದಿಂದಲೂ ಭುಜ ಕೀರಿಟಗಳಿಂದಲೂ ವಜ್ರಾಯುಧಕ್ಕೆ ಸಮಾನವಾದ ಗದೆಯಿಂದಲೂ ಕೂಡಿ ಪ್ರಕಾಶಿಸುತ್ತಿದ್ದನು. ಶಿವತೇಜೀಮಯ ಶಿಶುವನ್ನು ನೋಡಿ ವಾನರ ಕುಲವೆಲ್ಲಾ ಆನಂದಪಟ್ಟಿತು. ಆ ಪುತ್ರನನ್ನು ಆಂಜನೇಯನೆಂದು ಕರೆಯತೊಡಗಿದರು.

ಒಂದು ದಿನ ಆಂಜನೇಯನು ಪೂರ್ವದಿಕ್ಕಿನಲ್ಲಿ ಉದಯಿಸುತ್ತಿದ್ದ ಸೂರ್ಯನನ್ನು ಕಣ್ಣೆಂದು ಭ್ರಮಿಸಿ, ಗಗನಕ್ಕೆ ಹಾರಿ ಅವನನ್ನು ಹಿಡಿದು ತಿಂದನು. ಲೋಕವೆಲ್ಲಾ ಕಾರ್ಗತ್ತಲೆಯಲ್ಲಿ ಮುಳುಗಿತು. ಇದನ್ನು ಕಂಡ ಇಂದ್ರನು ತನ್ನ ಗದೆಯಿಂದ ಆಂಜನೇಯನ ಮುಖಕ್ಕೆ ಹೊಡೆದನು. ಆ ಹೊಡೆತದಿಂದ ಆಂಜನೇಯನು ಮೂರ್ಛಿತನಾಗಿ ಭೂಮಿಗೆ ಬಿದ್ದನು. ತನ್ನ ಮಗನ ಅವಸ್ಥೆಯನ್ನು ಕಂಡು ವಾಯುವು. ಆಂಜನೇಯನನ್ನು ಎತ್ತಿಕೊಂಡು ಹೋಗಿ ಮಹಾಕಾಲ ಲಿಂಗ ಸನ್ನಿಧಿಯಲ್ಲಿರಿಸಿ ಭಕ್ತಿಯಿಂದ ಶಿವನನ್ನು ಪ್ರಾರ್ಥಿಸಿದನು. ಲಿಂಗ ಸ್ಪರ್ಶವಾದೊಡನೆಯೇ ಆಂಜನೇಯನು ಎಚ್ಚೆತ್ತು ಮುಂದಿದ್ದ ಲಿಂಗಕ್ಕೆ ನಮಿಸಿ ಭಕ್ತಿಯಿಂದ ಪ್ರಾರ್ಥಿಸಿದನು. ಇದನ್ನು ಕಂಡು ಹರಿ–ಬ್ರಹ್ಮ–ಇಂದ್ರಾದಿ ದೇವತೆಗಳು ಅಲ್ಲಿಗೆ ಆಗಮಿಸಿ ನಾನಾ ಬಗೆಯಿಂದ ಶಿವನನ್ನು ಪ್ರಾರ್ಥಿಸಿದರು. ಶಿವನು ಅವರೆಲ್ಲರಿಗೂ ದರ್ಶನವಿತ್ತು "ಎಲೈ ಹನುಮಂತನೇ! ಯಾವ ಆಯುಧದಿಂದಲೂ ನಿನಗೆ ಮರಣವಾಗದಿರಲಿ. ನೀನು ಅಜೇಯನೂ ಚಿರಂಜೀವಿಯೂ ಅರಿಭಯಂಕರನೂ ಮಿತ್ರರಿಗೆ ಅಭಯಪ್ರದನೂ ಶ್ರೀರಾಮನಿಗೆ ಪ್ರಿಯನೂ ಆಗು" ಎಂದು ಹರಸಿದನು. ಅಲ್ಲಿ ನೆರೆದಿದ್ದ ಇಂದ್ರಾದಿ ದೇವತೆಗಳಿಂದ ಬಗೆ ಬಗೆಯ ವರಗಳನ್ನು ಆಂಜನೇಯನು ಪಡೆದನು. ಪುನಃ ವಾಯುವು ಆಂಜನೇಯನನ್ನು ಪಂಪಾಕ್ಷೇತ್ರದಲ್ಲಿರುವ ಅಂಜನಾದ್ರಿಗೆ ಕರೆತಂದನು. ಮಗನಿಗೆ ಲಭಿಸಿದ ವರಗಳನ್ನು ತಿಳಿದು ಅಂಜನೀದೇವಿಯು ಹಿರಿ ಹಿರಿ ಹಿಗ್ಗಿದಳು. ಶಿವಾನುಗ್ರವನ್ನು ನೆನೆದು ಸುಖದಿಂದಿದ್ದಳು. ಮಾತಾಪಿತೃಗಳ ಸಲಹೆಯಂತೆ ಹನುಮಂತನು ಸೂರ್ಯದೇವನ ಬಳಿಗೆ ಹೋಗಿ ಸಕಲ ವೇದವೇದಾಂತ ಶಾಸ್ತ್ರಾದಿಗಳನ್ನೂ ಕುರಿತು ಪಾರಂಗತನಾದನು.

ಮುಂದೆ ಹನುಮಂತನು ತನ್ನ ಮಾತಾ ಪಿತೃಗಳ ಹಾಗೂ ಸೂರ್ಯದೇವನ ಅನುಜ್ಞೆಯನ್ನು ಪಡೆದು, ಸೂರ್ಯನ ಅಂಶದಿಂದ ಜನಿಸಿದ್ದ ಸುಗ್ರೀವನ ಬಳಿಗೆ ಹೋದನು. ಶಿವ ತೇಜಸ್ವಿಯೂ ಬ್ರಹ್ಮಚರ್ಯ ವ್ರತಿಯೂ ಆದ ಆಂಜನೇಯನ ಪ್ರತಿಭೆಯನ್ನು ಗುರ್ತಿಸಿ ಸುಗ್ರೀವನು ಅವನನ್ನು ತನ್ನ ಹನ್ನೆರಡು ಜನ ಮಂತ್ರಿಗಳಲ್ಲಿ ಒಬ್ಬನನ್ನಾಗಿ ಸ್ವೀಕರಿಸಿ ಮಂತ್ರಿ ಮಂಡಲಕ್ಕೆ ಸೇರಿಸಿಕೊಂಡನು.

**ಮಾಲ್ಯವಂತ ಪರ್ವತ**

ಹೊಸಪೇಟೆಯಿಂದ ಕಂಪ್ಲಿಗೆ ಹೋಗುವ ದಾರಿಯಲ್ಲಿ ವೆಂಕಟಾಪುರ ಹಾಗೂ ಕಮಲಾಪುರದ ನಡುವೆ ರಸ್ತೆಯ ಎಡಬದಿಗೆ ಮಾಲ್ಯವಂತ ಪರ್ವತವಿದೆ. ಹಂಪಿಯ ಸಪ್ತಪರ್ವತಗಳಲ್ಲಿ ಮಾಲ್ಯವಂತ ಪರ್ವತವೂ ಒಂದು. ಪೂರ್ವದಲ್ಲಿ ಮಾಲ್ಯವಂತನೆಂಬುವನು ಕೇರಳ ದೇಶದಲ್ಲಿ ಜಯಸಿಂಹ ಮಹಾರಾಜನ ಪಟ್ಟಣದಲ್ಲಿ ವಾಸಿಸುತ್ತಿದ್ದನು. ನಿತ್ಯವೂ ಮಹಾರಾಜನ ಪೂಜೆಗೋಸ್ಕರ ಹೂಮಾಲೆಗಳನ್ನು ಮಾಡಿ ಭೂಪಾಲನ ಸಂತೋಷಕ್ಕಾಗಿ ಕೊಡುತ್ತಿದ್ದನು. ಅದರಿಂದ ಬಹುಕಾಲ ಸುಖದಿಂದಿದ್ದನು. ರಾಜನು ಒಮ್ಮೆ ಜಯಸಿಂಹನ ಹೂಮಾಲೆಯಲ್ಲಿ ಒಂದು ಕೂದಲನ್ನು ಕಂಡು ಸಿಟ್ಟಿನಿಂದ ಪರಿಚಾರಕರನ್ನು ಕರೆದು

“ಎಲೆ ದುಷ್ಟರೆ! ನೋಡಿರಿ, ಈ ಪೂಜಾ ಮಾಲೆಯಲ್ಲಿ ಕೂದಲಿದೆ. ಎಂತಹ ಪ್ರಮಾದವಾಯಿತಲ್ಲ!” ಎಂದು ನುಡಿಯಲು ಆಗ ದೂತರು ಭಯದಿಂದ “ರಾಜನ್! ಈ ಅಪರಾಧವು ನಮ್ಮದಲ್ಲ. ನಮಗೆ ಗೊತ್ತಿಲ್ಲ. ಆದರೆ ಈ ಕೂದಲು ನಿರ್ಮಾಲ್ಯವಾದ ಸ್ತ್ರೀಯರ ತಲೆಕೂದಲಾಗಿದೆ. ಈ ಹೂಮಾಲೆಯನ್ನು ಮಾಡಿ ತಂದುಕೊಟ್ಟವನು ಮಾಲ್ಯವಂತನು. ಇದು ಅವನ ಅಜಾಗರೂಕತೆಯಿಂದ ನಡೆದ ಕಾರ್ಯ” ಎಂಬುದಾಗಿ ಭೂಪತಿಯ ಮುಂದೆ ಅರಿಕೆ ಮಾಡಿಕೊಂಡರು.

ಆ ಕೂಡಲೇ ಮಹಾರಾಜನು ಕೋಪಿಷ್ಠನಾಗಿ ಭಟರಿಂದ ಮಾಲ್ಯವಂತನನ್ನು ಕರೆತರಿಸಿ “ಎಲವೋ ಮೂರ್ಖನೆ! ಪೂಜೆಗೋಸ್ಕರ ನೀನು ತಂದುಕೊಟ್ಟಿರುವ ಹೂಮಾಲೆಯಲ್ಲಿ ಸ್ತ್ರೀಯರ ನಿರ್ಮಾಲ್ಯ ಕೂದಲನ್ನು ಇರಿಸಿರುವೆಯಾ! ದುರುದ್ದೇಶದಿಂದ ಮಾಡಬಾರದುದನ್ನು ಮಾಡಿದೆಯಾ! ನಿನಗಿಂದು ಇಂಥ ವಿಪರೀತ ಬುದ್ದಿಯು ಹುಟ್ಟಿತೇ! ಅದರ ದೆಸೆಯಿಂದ ನೀನು ದೋಷಿಯಾಗಿರುವಿ. ನನ್ನ ಸಮೀಪದಲ್ಲಿ ನಿಲ್ಲಬೇಡ. ನನ್ನ ದೇಶದಿಂದ ಹೊರಹೋಗು” ಎಂಬುದಾಗಿ ಬಿರುನುಡಿಗಳಿಂದ ಬಯ್ದು ಬಡಿದು ತನ್ನ ದೇಶದಿಂದ ಹೊರಗೆ ಕಳುಹಿಸಲು ನಿಶ್ಚಯಿಸಿದನು.

ಮಹಾರಾಜನ ಮಾತುಗಳನ್ನು ಕೇಳಿ ಭಯದಿಂದ ಮಾಲ್ಯವಂತನು “ಮಹಾರಾಜಾ! ಯಾವ ದುರಾಸೆಯಿಂದಲೂ ಹೂಮಾಲೆಯಲ್ಲಿ ಸ್ತ್ರೀಯರ ಕೂದಲನ್ನು ನಾನು ಇರಿಸಿಲ್ಲ. ಎಳ್ಳಷ್ಟಾದರೂ ನನ್ನಲ್ಲಿ ಅಪವಾದವಿಲ್ಲ. ಆದರೂ ಕೂಡ ನನಗಿಂದು ಅಪವಾದವು ಸಂಭವಿಸಿತು. ಇದು ನನ್ನ ಪ್ರಾರಬ್ಧ ಕರ್ಮದ ಫಲ! ಅಗಲಿ ಮಹಾರಾಜಾ! ನಿನ್ನ ಆಜ್ಞೆಯಂತೆ ನಿನ್ನ ರಾಜ್ಯದಿಂದ ಹೊರ ಹೋಗುವೆನು” ಎಂದು ಹೇಳಿ ಕೇರಳದಿಂದ ಹೊರಹೊರಟು ತಾನು ಸಂಪಾದಿಸಿದ ಸಂಪತ್ತನ್ನು ಶಿವಸ್ವರೂಪಿಗಳಿಗೆ ದಾನಮಾಡಿ ಪರಮ ವೈರಾಗ್ಯ ನಿಧಿಯಾಗಿ ಸಂಸಾರದ ಮೇಲಿನ ವ್ಯಾಮೋಹವನ್ನು ಕಿತ್ತೊಗೆದು ಗಿರಿ–ಅರಣ್ಯ–ನಗರಗಳಲ್ಲಿ ಸಂಚರಿಸುತ್ತ ಒಬ್ಬ ಋಷಿಯ ಅಪ್ಪಣೆಯಂತೆ ಶೀಘ್ರವಾಗಿ ಹರ್ಷದಿಂದ ಪಂಪಾಕ್ಷೇತ್ರಕ್ಕೆ ಬಂದನು. ಅಲ್ಲಿ ಮಾಲ್ಯವಂತ ಋಷಿಯ ಸಂಪರ್ಕದಿಂದ ಕ್ಷೇತ್ರಪಾಲ ವಿರೂಪಾಕ್ಷನನ್ನು ಕುರಿತು ತಪಸ್ಸು ಮಾಡುವಂತೆ ರಾಮ ಲಕ್ಷ್ಮಣರು ನಿರ್ದೇಶಿತರಾದರು. ಹನುಮಂತ ಸುಗ್ರೀವರ ಪರಿಚಯವಾದದ್ದು ಇಲ್ಲೆ. ಎಂಬುದಾಗಿ ಜನಸಾಮಾನ್ಯರು ಅಭಿಪ್ರಾಯಪಡುತ್ತಾರೆ.

ಮಾಲ್ಯವಂತ ಪರ್ವತದಲ್ಲಿ ದುಂಡನೆಯ ಕಲ್ಲುಗಳಿವೆ. ಜನರ ಪ್ರಕಾರ ಶ್ರೀರಾಮನು ಈ ಪರ್ವತದಲ್ಲಿದ್ದಾಗ ದಶರಥನ ಶ್ರಾದ್ಧ ಮಾಡಬೇಕಾಯಿತಂತೆ. ಅದಕ್ಕಾಗಿ ರಾಮಚಂದ್ರನು ಇಟ್ಟ ಪಿಂಡಗಳೇ ಮುಂದೆ ಕಲ್ಲುಗಳಾದವೆಂದು ಅವರು ಹೇಳುತ್ತಾರೆ. ಜನರು ಹೇಳುವ ಪ್ರಕಾರ ಇಲ್ಲಿನ ರಾಮದೇವರ ಗುಡಿಯ ಹಿಂದೆ ಕಲ್ಲಿನ ಎರಡು ದೊಡ್ಡ ದೋಣಿಗಳಿದ್ದು ಇವನ್ನು ರಾಮಲಕ್ಷ್ಮಣರ ದೋಣಿ ಅಥವಾ ರಾಮತೀರ್ಥ ಲಕ್ಷ್ಮಣತೀರ್ಥ ಎಂದು ಜನ ಕರೆಯುತ್ತಾರೆ. ವನವಾಸದ ಕಾಲದಲ್ಲಿ ರಾಮಲಕ್ಷ್ಮಣರು ಒಂದು ವರ್ಷಕಾಲ ಇಲ್ಲೇ ನೆಲೆಸಿದ್ದರು ಎಂಬ ನಂಬಿಕೆ ಸಾರ್ವತ್ರಿಕವಾಗಿದೆ. ಲಂಕೆಯಲ್ಲ ಸೀತಾದೇವಿ ಇರುವುದನ್ನು ಖಾತರಿಪಡಿಸಿದ ಹನುಮಂತ ಸೀತೆಯಿಂದ ತಂದ ಮುದ್ರೆ ಉಂಗುರವನ್ನು ರಾಮನಿಗೆ ನೀಡಿದ ಸ್ಥಳ ಇದೆ ಎಂದು ಹೇಳಲಾಗುತ್ತದೆ. ಈ ಸ್ಥಳದ ಮಹತ್ವವನ್ನು ಗುರುತಿಸಿ ವಿಜಯನಗರದ ಅರಸರು ಮಾಲ್ಯವಂತ ಬೆಟ್ಟದ ಮೇಲೆ ಬೃಹತ್ ರಾಮದೇವಾಲಯವನ್ನು ನಿರ್ಮಿಸಿದರು. ಈ ಬೆಟ್ಟದಲ್ಲಿ ರಾಮನವಮಿ ಹಾಗೂ ಹನುಮ ಜಯಂತಿ ಜಾತ್ರೆ ಉತ್ಸವಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

**ಋಷ್ಯಮೂಕ ಪರ್ವತ**

ಹಂಪಿಯ ಪವಿತ್ರ ಪರ್ವತ ಕ್ಷೇತ್ರಗಳಲ್ಲಿ ಋಷ್ಯಮೂಕ ಪರ್ವತವೂ ಒಂದು. ಈ ಒಂದು ಪವಿತ್ರ ಸ್ಥಳದಲ್ಲಿ ಸಪ್ತಋಷಿಗಳಾದ, ಕಶ್ಯಪ, ಅತ್ರಿ, ಭರದ್ವಾಜ, ವಿಶ್ವಾಮಿತ್ರ, ಗೌತಮ, ಜಮದಗ್ನಿ, ವಶಿಷ್ಠರು ತಪಸ್ಸು ಮಾಡಿ ಜ್ಞಾನ ಪಡೆದರಂತೆ. ಹಾಗಾಗಿ ಈ ಪರ್ವತಕ್ಕೆ ಋಷ್ಯಮುಖ ಪರ್ವತವೆಂದು ಹೆಸರಾಯಿತು. ಈ ಪರ್ವತದಲ್ಲಿರುವ ಗುಹೆಗಳಲ್ಲಿ ಇಂದಿಗೂ ಸಹ ಅನೇಕ ಸಂತರು ವಾಸಮಾಡುತ್ತಿದ್ದಾರೆ.

**ಕೋತಿ ಇನಾಮ್**

ಕಮಲಾಪುರದಿಂದ ಹಂಪಿಗೆ ಹೋಗುವ ಮಾರ್ಗದಲ್ಲಿ ಕಂಡುಬರುವ ಅಕ್ಕತಂಗಿಯರ ಗುಂಡುಗಳ ಎಡಭಾಗದಲ್ಲಿರುವ ಕೃಷಿ ಭೂಮಿಯನ್ನು ಕೋತಿ ಇನಾಮ್ ಎಂದು ಕರೆಯುತ್ತಾರೆ. ಸುಮಾರು 20 ಎಕರೆ ಭೂಪ್ರದೇಶವಿರುವ ಈ ಜಾಗವನ್ನು ಕೋತಿಗಳ ಊಟಕ್ಕೆಂದೇ ಮೀಸಲಿಡಲಾಗಿತ್ತಂತೆ. 'ಈ ವಾನರರು ನಮಗಿಂತಲೂ ಮೊದಲು ಇಲ್ಲಿ ಸಾಮ್ರಾಜ್ಯ ಸ್ಥಾಪಿಸಿದ್ದರಿಂದ ನ್ಯಾಯವಾಗಿ ಅವರಿಗೆ ಸಲ್ಲಬೇಕಾದ್ದು ಇದು ಎಂದು ಹಿಂದಿನ ದೊರೆಗಳು ಆಲೋಚಿಸಿ ಹೀಗೆ ಮಾಡಿದರು' ಎಂದು ಜನರು ಹೇಳುತ್ತಾರೆ. ಈಗ ಈ ಪ್ರದೇಶವನ್ನು ನೋಡಿಕೊಳ್ಳುವ ಜನರು ಮಧ್ಯಾಹ್ನ ಒಂದು ಗಂಟೆಗೆ ವಿರೂಪಾಕ್ಷ ದೇವಾಲಯದಲ್ಲಿರುವ ಕೋತಿಗಳಿಗೆ ಊಟ ಹಾಕುತ್ತಾರೆ. ಇಂಥದ್ದೇ ಉದ್ದೇಶವಿರುವ ಕೋತಿಕೊಡುಗೆ, ಕೋತಿಭೂವಿ ಎಂಬ ಹೆಸರಿನ ಸ್ಥಳಗಳು ಹಂಪಿಯಲ್ಲಿವೆ.

**ಸೀತೆ ಸೆರಗು**

ಹಂಪಿಯ ಪ್ರಸಿದ್ಧವಾದ ಸುಗ್ರೀವ ಗುಹೆಯ ಎದುರಿಗಿರುವ ಹಾಸು ಬಂಡೆಯ ಮೇಲೆ ಕಂಡು ಬರುವ ಬಿಳಿಯ ಗೆರೆಗಳನ್ನು ಸೀತೆಸೆರಗು ಎಂದು ಕರೆಯಲಾಗುತ್ತದೆ. ಸುಗ್ರೀವ ಗುಹೆಯಲ್ಲಿದ್ದ ಸೀತೆಯನ್ನು ರಾವಣನು ಬಲಾತ್ಕಾರದಿಂದ ಎಳೆದೊಯ್ಯುವಾಗ, ಆಕೆಯ ಸೆರಗು ಬಂಡೆಯ ಮೇಲೆ ಬಿದ್ದು, ಈ ಗುರುತು ಆಯಿತು ಎಂಬ ನಂಬಿಕೆಯಿದೆ. ಮುಂದೆ ಸುಗ್ರೀವಾದಿ ಕಪಿಗಳು ಈ ಸೆರಗಿನ ಗುರತನ್ನು ಆಧರಿಸಿಯೇ ಸೀತೆಯನ್ನು ಪತ್ತೆ ಮಾಡಲು ಸಾಧ್ಯವಾಯಿತು ಎಂದು ಸ್ಥಳೀಯ ಜನಪದರು ಹೇಳುತ್ತಾರೆ.

**ವಾನರರು ಮತ್ತು ಹಂಪಿಯ ಕಲ್ಲು ರಾಶಿ**

ಹಂಪಿಯಲ್ಲಿ ಹೇರಳವಾಗಿ ಕಲ್ಲುಗಳಿವೆ. ಇಲ್ಲಿ ಇಷ್ಟರ ಮಟ್ಟಿಗೆ ಕಲ್ಲುಗಳಿರಲು ಕಾರಣಗಳಿವೆ, ಅದೆಂದರೆ ಶ್ರೀ ರಾಮಚಂದ್ರನು ಕಪಿ ಸೇನೆಯನ್ನು ಕರೆದುಕೊಂಡು ಸೇತುವೆ ಕಟ್ಟುವಾಗ ವಾನರ ಸೈನ್ಯಕ್ಕೆ ಬಂಡೆಗಳನ್ನು ತರಲು ಹೇಳಿದ. ಅದರಂತೆ ವಾನರರು ಕಲ್ಲುಬಂಡೆಗಳನ್ನು ಹೊತ್ತು ತಂದರು. ಸೇತುವೆಯ ನಿರ್ಮಾಣ ಕೊನೆಗೊಂಡಾಗ ಶ್ರೀರಾಮನು ವಾನರ ಸೇನೆಯನ್ನು ಉದ್ದೇಶಿ 'ಸೇತುವೆ ಮುಗಿತ್ರಪ್ಪ ಕಲ್ಲು ಸಾಕು' ಎಂದ. ಆಗ ಕಲ್ಲುಬಂಡೆಗಳನ್ನು ಹೊತ್ತು ತರುತ್ತಿದ್ದ ವಾನರ ಸೇನೆ ಅವನ್ನು ಅಲ್ಲಲ್ಲೇ ಎಸೆದವಂತೆ. ಅಂದಿನಿಂದ ಹಂಪಿಯಲ್ಲಿ ಕಲ್ಲುಬಂಡೆಗಳು ರಾಶಿರಾಶಿಯಾಗಿ ಬಿದ್ದಿವೆ ಎಂದು ಹೇಳಲಾಗುತ್ತಿವೆ.

ವಿಶೇಷವಾಗಿ ಕರ್ನಾಟಕದ ಹಂಪಿ ರಾಮಾಯಣದ ಪ್ರಮುಖ ಭಾಗವಾದ ಕಿಷ್ಕಿಂಧೆಯಾಗಿ ಗುರುತಿಸಿಕೊಂಡಿದೆ. ಅದರಲ್ಲೂ ವಿಶೇಷವಾಗಿ ಹನುಮನ ಜನ್ಮ ಭೂಮಿಯಾಗಿ ಗುರುತಿಸಿಕೊಳ್ಳುವುದರ ಮೂಲಕ ಜನ ಮಾನಸದಲ್ಲಿ ತನ್ನದೇ ಅನನ್ಯತೆಯನ್ನು ಪಡೆದುಕೊಂಡಿದೆ. ಈ ಪ್ರದೇಶದಲ್ಲಿ ಜನಪದರಲ್ಲಿ ರಾಮಾಯಣದ ಬಗೆಗೆ ದೊರಕುವ ಹೆಚ್ಚಿನ ಮಾಹಿತಿಗಳಲ್ಲಿ ಹನುಮನದು ಸಿಂಹ ಪಾಲು.

ಹಾಗಾಗಿ ಹಂಪಿ ಪರಿಸರದ ಈ ಬಗೆಯ ಜಾನಪದ ಪರಂಪರೆ ಹನುಮಾಯಣವನ್ನು ವಿಶೇಷವಾಗಿ ಬಿಂಬಿಸುತ್ತದೆ. ಈ ಪ್ರದೇಶದಲ್ಲೇ ಅಂಜನಾದೇವಿಯ ಹಾಗೂ ಹನುಮಂತನ ಹುಟ್ಟಿದ ವಿವರಗಳನ್ನು ದೃಢಪಡಿಸುತ್ತವೆ. ಹನುಮಂತನ ವಂಶ ಪರಂಪರೆಯ ಪರಿಪೂರ್ಣ ಕಥನಗಳು ನಮಗೆ ಇಲ್ಲಿ ದೊರಕುತ್ತವೆ. ಹನುಮಂತ ಅಥವಾ ಅಂಜನಾದೇವಿಯರು ಈ ಪ್ರದೇಶಕ್ಕೆ ಬೇರೆಕಡೆಯಿಂದ ಬಂದು ನೆಲೆಸಿದ ಯಾವುದೇ ಕಥನಾ ಮಾಹಿತಿಗಳು ಲಭ್ಯವಿಲ್ಲ. ಈ ಪ್ರದೇಶದ ಮೂಲ ವ್ಯಕ್ತಿಗಳಾದ ಆಹಲ್ಯೆ, ಅಂಜನಾದೇವಿ, ವಾಲಿ,ಸುಗ್ರೀವ, ಹನುಮಂತ, ಇಳ, ಜಾಂಬುವಂತ ಇತ್ಯಾದಿ ವ್ಯಕ್ತಿಗಳ ಬಗೆಗೆ ಈ ಪ್ರದೇಶದ ಸಮುದಾಯಗಳಲ್ಲಿ ಇವರುಗಳೆಲ್ಲ. ಅವರ ಜೀವನದ ಅವಿಭಾಜ್ಯ ಅಂಗವಾಗಿ ಕಂಡುಬರುತ್ತಾರೆ. ಹಾಗಾಗಿ ಈ ವ್ಯಕ್ತಿಗಳನ್ನು ಕುರಿತಂತೆ ಹಬ್ಬ, ಜಾತ್ರೆ, ಉತ್ಸವ, ಆಚರಣೆ, ಸಂಪ್ರದಾಯ, ಮೌಖಿಕ ಕಾವ್ಯ, ಕಥನ, ಹಾಡು, ಗಾದೆ, ಒಗಟು ಪ್ರಕಾರಗಳು ಹೆಚ್ಚಾಗಿ ಕಂಡುಬರುತ್ತವೆ. ಹನುಮಂತನ ಹೆಸರಿನಲ್ಲಿ ನಿರ್ಮಾಣಗೊಡ ಊರುಗಳು, ಸಮುದಾಯಗಳು ತಮ್ಮ ಕುಟುಂಬದ ಸದಸ್ಯರಿಗೆ ಇಟ್ಟುಕೊಳ್ಳುವ ಹೆಸರುಗಳು, ಪ್ರತಿ ಗ್ರಾಮಗಳಲ್ಲೂ ನಿರ್ಮಾಣಗೊಡಿರುವ ಹನುಮಂತನ ಗುಡಿಗಳು, ಹನುಮನಿಗೆ ಮೊದಲಪೂಜೆ ಎಂಬುದರ ಮೂಲಕ ಹನುಮಂತ ಈ ನೆಲದ, ಜಲದ, ಜನರ ಮೌಲ್ಯವಾಗಿ ಗಟ್ಟಿಗೊಂಡಿದ್ದಾನೆ.

**ತಾರಾಪರ್ವತ**

ಪೂರ್ವದಲ್ಲಿ ಬೃಹಸ್ಪತಿಯ ಹೆಂಡತಿಯಾದ ತಾರಾದೇವಿಯು ಚಂದ್ರನ ಸೌಂದರ್ಯಕ್ಕೆ ಮೋಹಿತಳಾಗಿ ಅವನೋಂದಿಗೆ ವ್ಯಭಿಚಾರವನ್ನು ಮಾಡಿದಳು. ಚಂದ್ರನ ದೆಸೆಯಿಂದ ಗರ್ಭಿಣಿಯಾಗಿ ಅವಳು ಬುಧನನ್ನು ಹೆತ್ತಳು. ಹೆಂಡತಿಯ ದುರ್ನಡತೆಯನ್ನು ತಿಳಿದು ಬೃಹಸ್ಪತಿಯು ಕೋಪಾರೂಢನಾಗಿ ಚಂದ್ರನ ಸಹಾಯದೊಂದಿಗೆ ಚಂದ್ರನೊಡನೆ ಯುದ್ದಮಾಡಿದನು. ಚಂದ್ರನು ಪರಾಕ್ರಮತನದಿಂದ ಯುದ್ದಮಾಡಿ ಬೃಹಸ್ಪತಿ ಮೊದಲಾದವರನ್ನು ಗೆದ್ದು ಸುಂದರ ಪುತ್ರಸಮೇತಳಾದ ತಾರಾದೇವಿಯನ್ನು ತನ್ನ ಲೋಕಕ್ಕೆ ತೆಗೆದುಕೊಂಡು ಹೋದನು. ತಾರಾದೇವಿಯಾದರೂ ತಾನು ಮಾಡಿದ ತಪ್ಪನ್ನು ನೆನೆದು ಬಹಳವಾಗಿ ನೊಂದುಕೊಂಡಳು. ಆ ದೋಷ ನಿವಾರಣೆಗಾಗಿ ಎಡಬಿಡದೆ ಚಿಂತಿಸಿದಳು.

ಬ್ರಹ್ಮನು “ಭದ್ರೇ ! ಪಾವನವೂ ಮೋಕ್ಷದಾಯಕವೂ ಆದ ಪಂಪಾಕ್ಷೇತ್ರಕ್ಕೆ ಹೋಗು. ಶ್ರೀ ವಿರೂಪಾಕ್ಷನನ್ನು ಭಜಿಸು. ಶಿವನು ನಿನಗೆ ಸುಖವನ್ನುಂಟು ಮಾಡುವನು” ಎಂದು ಅಪ್ಪಣೆ ಮಾಡಿದನು. ಬ್ರಹ್ಮನ ಆಜ್ಞೆಯಂತೆ ತಾರಾದೇವಿಯು ಪಂಪಾಕ್ಷೇತ್ರವನ್ನು ನಮಸ್ಕರಿಸಿ ಈ ಪರ್ವತಕ್ಕೆ ಬಂದನು. ಬಳಿಕ ವಿರೂಪಾಕ್ಷನನ್ನು ಕುರಿತು ಉಗ್ರವಾದ ತಪಸ್ಸನ್ನಾಚರಿಸಿದಳು. ನಿರಾಹಾರದಿಂದ ವಿರೂಪಾಕ್ಷನನ್ನು ಹಗಲಿರುಳೂ ಧ್ಯಾನಿಸಿದಳು. ವಿಧಿವತ್ತಾಗಿ ವಿರೂಪಾಕ್ಷನನ್ನು ಭಕ್ತಿಭಾವದಿಂದ ಪೂಜಿಸಿದಳು. ಹೀಗೆ ನೂರು ವರ್ಷಗಳ ಕಾಲ ತಾರಾದೇವಿಯು ಈ ಗಿರಿಯಲ್ಲಿ ಉಗ್ರವಾದ ತಪಸ್ಸು ಮಾಡಿದಳು. ಆಕೆಯ ತಪೋನಿಷ್ಠೆಯಿಂದ ಸಂತುಷ್ಟನಾದ ಶಿವನು ಪ್ರತ್ಯಕ್ಷನಾದನು. ಕೋಟಿ ಸೂರ್ಯ ಸಮಪ್ರಭನಾದ ಪ್ರಮಥರಿಂದ ಕೂಡಿದವನಾದ ಪಾರ್ವತೀಸಮೇತನಾದ ಪ್ರಭು ವಿರೂಪಾಕ್ಷನನ್ನು ನೋಡಿ ತಾರಾದೇವಿಯು ಭಕ್ತಿಸಾಷ್ಟಾಂಗದಿಂದ ನಮಸ್ಕರಿಸಿದಳು. “ನಾನು ಲೋಕನಿಂದಿತಳಾಗಿದ್ದೇನೆ, ನನ್ನನ್ನು ಲೋಕವಂದಿತಳನ್ನಾಗಿ ಮಾಡು ಹಾದರಗಿತ್ತಿಯಾಗಿದ್ದೇನೆ, ಪತಿವ್ರತೆಯನ್ನಾಗಿ ಮಾಡು. ಮಹಾದೇವಾ, ಭಕ್ತ ವತ್ಸಲನಾದ ನೀನು ನನ್ನನ್ನು ಕೃಪೆಯಿಂದ ನೋಡು. ಚಂದ್ರನಿಂದ ಗರ್ಭಿಣಿಯಾಗಿ ಸುಂದರ ಪುತ್ರನನ್ನು ಹೆತ್ತಿರುವೆನು. ಲೋಕ್ಯಮಾನ್ಯನಾಗುವಂತೆ ಆ ನನ್ನ ಮಗನನ್ನು ಅನುಗ್ರಹಿಸು” ಎಂದು ಬೇಡಿದಳು. ವಿರೂಪಾಕ್ಷನು ಅವಳ ಸ್ತೋತ್ರದಿಂದ ಸಂತುಷ್ಟನಾಗಿ “ಎಲೆ ತಾರೇ, ಬುಧನ ಜನ್ಮದ

ದೆಸೆಯಿಂದ ನನ್ನ ಪ್ರೇರಣೆಯಂತೆ ತಾರೆಯು ಯಾವ ಸರಸ್ಸಿನಲ್ಲಿ ಸ್ನಾನಮಾಡಿ ಶಂಕರನನ್ನು ಕುರಿತು ತಪಸ್ಸು ಮಾಡಿದಳೋ ಅದಕ್ಕೆ ತಾರಾತೀರ್ಥವೆಂದು ಕರೆಯುತ್ತಾರೆ

ಒಟ್ಟರೆಯಾಗಿ ಹನುಮನ ತಾಯಿ ಅಂಜನಾದೇವಿಯ ಹುಟ್ಟು, ಹನುಮನ ಮಾವಂದುರುಗಳಾದ ವಾಲಿ ಸುಗ್ರೀವರ ಹುಟ್ಟು, ಅಂಜನಾದೇವಿ ಹಾಗೂ ವಾಲಿ ಸುಗ್ರೀವರ ತಂದೆ ತಾಯಿಗಳಾದ ಅಹಲ್ಯೆ ಹಾಗೂ ಗೌತಮ ಋಷಿಗಳ ವಾಸದ ಪ್ರದೇಶ ಇಂದಿನ ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೋಕಿನ ತುಂಗಭದ್ರ ನದಿಯ ಎಡದಂಡೆಯ ಶಿವಪುರ ಪ್ರದೇಶ. ಇಂದಿಗೂ ಈ ಪ್ರದೇಶದಲ್ಲಿ ಅಂಜನಾದೇವಿ ಹಾಗೂ ವಾಲಿಸುಗ್ರೀವರ ಬಗೆಗೆ ಹೆಚ್ಚಿನ ಮೌಖಿಕ ಸಾಹಿತ್ಯ ಜನಪದರಲ್ಲಿ ದೊರಕುತ್ತದೆ. ಅಲ್ಲದೆ ನಿಸರ್ಗ ನಿರ್ಮಿತವಾದ ಬಂಡೆಗಳ ಸಂಧಿನ ಗವಿಯೊಂದನ್ನು ಅಂಜನಾದೇವಿಯ ಗವಿ ಅಥವಾ ಗುಡಿ ಎಂದು ಜನರು ಕರೆಯುತ್ತಾರೆ. ಇಂದಿಗೂ ಹನುಮಜಯಂತಿಯ ಸಂದರ್ಭದಲ್ಲಿ ಅಂಜನಾದೇವಿಯ ಮೂರ್ತಿಯನ್ನು ಅಂಜನಾದ್ರಿ ಬೆಟ್ಟಕ್ಕೆ ಕೊಂಡೊಯ್ಯುವ ಪದ್ಧತಿ ಕಂಡುಬರುತ್ತದೆ. ಹನುಮ ಹುಟ್ಟಿದ್ದು ಅಂಜನಾದ್ರಿಯಲ್ಲಿ ಎಂಬುದು ಇಲ್ಲಿನ ಜನಪದರ ಗಟ್ಟಿಯಾದ ನಂಬಿಕೆ. ಅಂಜನಾದೇವಿಯ ತವರುಮನೆ ಶಿವಪುರದ ಸಮೀಪದ ನದಿದಂಡೆ ಪ್ರದೇಶವಾದರೆ, ಹನುಮಂತ ಹುಟ್ಟಿಬೆಳೆದ ತನ್ನ ಬಾಲ್ಯಾವಸ್ಥೆಯನ್ನು ಕಳೆದದ್ದು ಇಂದಿನ ಅಂಜನಾದ್ರಿ ಹಾಗೂ ಶಿವಪುರದ ನಡುವಿನ ತುಂಗಭದ್ರ ನದಿಯ ಎಡದಂಡೆ ಪ್ರದೇಶವಾದ ಸಾಣಾಪುರ ಪಕ್ಕದಲ್ಲೇ ಇರುವ ಗುಡ್ಡಕ್ಕೆ ಬಾಲಹನುಮನ ಗುಡ್ಡ ಎಂದು ಕರೆಯುತ್ತಾರೆ. ಇಲ್ಲಿ ಹನುಮಂತ ತನ್ನ ಬಾಲ್ಯವನ್ನು ಕಳೆದನೆಂದು ಹೇಳಲಾಗುತ್ತದೆ. ಮುಂದೆ ಕಿಷ್ಕಿಂಧಾ ನಗರವನ್ನು ಕಟ್ಟಿ ತನ್ನ ಸೋದರಮಾವಂದಿರೊಂದಿಗೆ ವಾಸಿಸುತ್ತಿದ್ದ ಬಗೆಗೆ ತಿಳಿದುಬರುತ್ತದೆ. ಹಂಪಿಯ ಕ್ಷೇತ್ರಪಾಲನಾದ ವಿರೂಪಾಕ್ಷದೇವರ ಪರಮ ಭಕ್ತನಾಗಿದ್ದು, ಲಿಂಗದೀಕ್ಷೆಯನ್ನು ಪಡೆದಿದ್ದ ಬಗೆಗೆ ಈ ಪ್ರದೇಶದ ಹನುಮನ ಶಿಲ್ಪಗಳು ಉದಾಹರಣೆಗೆ ಉದ್ಧಾನ ವೀರಭದ್ರ ದೇವಾಲಯದ ಮುಖ್ಯದ್ವಾರದ ಮುಂಭಾಗದಲ್ಲಿರುವ ಹನುಮಂತನ ಮೂರ್ತಿಯ ಕೊರಳಲ್ಲಿನ ಶಿವಲಿಂಗ. ರಾವಣನಿಂದ ಅಪಹರಿಸಲ್ಪಟ್ಟ ಸೀತೆಯನ್ನು ಹುಡುಕುತ್ತಾ ಕಿಷ್ಕಿಂಧೆಗ ಬಂದ ರಾಮನ ಬಗೆಗೆ, ಆ ಸಂದರ್ಭದಲ್ಲಿ ನಡೆದವೆನ್ನಲಾದ ಹಲವಾರು ಘಟನೆಗಳು, ರಾಮಾ ಹಾಗೂ ಹನುಮರ ಸಮಾಗಮ. ಹನುಮನಿಂದಲೇ ಲಂಕೆಯಿಂದ ಸೀತೆಯನ್ನು ತರಲಾಯಿತು ಎಂಬುದು ಇಲ್ಲಿನ ಜನಪದರ ಗಾಢವಾದ ನಂಬಿಕೆ. ರಾಮಾಯಣದಲ್ಲಿ ಕಿಷ್ಕಿಂಧಾ ಕಾಂಡ ಅತ್ಯಂತ ಪ್ರಮುಖವಾದ ಭಾಗ. ಈ ಪ್ರದೇಶದಲ್ಲಿರುವ ಅಂಜನಾದ್ರಿಯೇ ಹನುಮ ಹುಟ್ಟಿದ ಸ್ಥಳ ಎಂಬುದಕ್ಕೆ ಇನ್ನೂ ಸಾಕಷ್ಟ ಸಾಮಾಜಿಕ ಹಾಗೂ ಜನಪದ ಪುರಾವೆಗಳು ಅದನ್ನು ಸಾಕ್ಷೀಕರಿಸುತ್ತವೆ.

**ಪರಾಮರ್ಶನ ಗ್ರಂಥಗಳು**


- ಚಲುವರಾಜು. (2001). ಹಂಪಿ ಸ್ಮಾರಕಗಳಲ್ಲಿ ಜಾನಪದೀಯ ಅಂಶಗಳು. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- ಧ್ರುವನಾರಾಯಣ. (1968). ತುಂಗಭದ್ರಾ ಪರಿಸರದಲ್ಲಿ ಐತಿಹಾಸಿಕ ಮತ್ತು ಧಾರ್ಮಿಕ ಕ್ಷೇತ್ರಗಳು. ಇಲ್ಲಿ ಜಯತೀರ್ಥ ಪುರೋಹಿತ. (ಸಂ.), ತುಂಗ ತರಂಗ. ತುಂಗಭದ್ರ ಯೋಜನೆಯ ಆಡಳಿತಾಧಿಕಾರಿಗಳು.
- ಕೃಷ್ಣಯ್ಯ, ಎಸ್.ಎ. (1992). ಬಾಚಿಗೊಂಡನಹಳ್ಳಿ ಮತ್ತು ಏಣಗಿ ಬಸಾಪುರದ ಜನಪದ ಗೀತೆಗಳು. ಪ್ರಾದೇಶಿಕ ರಂಗ ಕಲೆಗಳ ಕೇಂದ್ರ.

- ನಾಗರಾಜ ಶ ಕಾಳಿ. (1968). ತುಂಗಭದ್ರ ಸೀಮೆಯ ಜನಜೀವನ. ಇಲ್ಲಿ ಜಯತೀರ್ಥ ಪುರೋಹಿತ. (ಸಂ.), ತುಂಗ ತರಂಗ. ತುಂಗಭದ್ರ ಯೋಜನೆಯ ಆಡಳಿತಾಧಿಕಾರಿಗಳು.
- ಪುರುಷೋತ್ತಮ ಬಿಳಿಮಲೆ & ಚಲುವರಾಜು. (1996). ಹಂಪಿ ಜಾನಪದ. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- ಸದಾನಂದ ಕನವಳ್ಳಿ (ಅನು.) (1992). ಮರೆತು ಹೋದ ಸಾಮ್ರಾಜ್ಯ ವಿಜಯನಗರ. ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ.
- ಶ್ರೀಕಂಠಯ್ಯ. (1983). ವಿಜಯನಗರ ಕಾಲದ ಕನ್ನಡ ಸಾಹಿತ್ಯದಲ್ಲಿ ಜನಜೀವನ ಚಿತ್ರ. ಗೀತಾ ಬುಕ್ ಹೌಸ್.
- ಸೂರ್ಯನಾಥ ಕಾಮತ್. (1984). ವಿಜಯನಗರ ಕಥೆಗಳು. ಹಂಸಧ್ವನಿ ಪ್ರಕಾಶನ.
- ಸ್ವಾಮಿ ನಮ್ಮಪ್ಪ. (1981). ಹಂಪಿ ಹೊಳೆ. ಮನೋಹರ ಗ್ರಂಥಮಾಲೆ.